# India @ 75

**ಸಿ.ಕೆ. ಪ್ರಹ್ಲಾದ್**
ಪೌಲ್ ಆ್ಯಂಡ್ ರುತ್ ಮ್ಯಾಕ್‌ಕ್ರ್ಯಾಕೆನ್ ಗೌರವಾನ್ವಿತ ವಿಶ್ವವಿದ್ಯಾಲಯ ಪ್ರಾಧ್ಯಾಪಕರು,
ರಾಸ್ ಸ್ಕೂಲ್ ಆಫ್ ಬ್ಯುಜಿನೆಸ್
ಮಿಚಿಗನ್ ವಿಶ್ವವಿದ್ಯಾಲಯ

ನ್ಯೂ ಯಾರ್ಕ್‌ನಲ್ಲಿ ಸೆಪ್ಟೆಂಬರ್ 23, 2007 ರಂದು
India@60 ಆಚರಣೆಯ ಸಂದರ್ಭದಲ್ಲಿ ಮಾಡಿದ ಉಪನ್ಯಾಸ

# India @ 75

**ಸಿ.ಕೆ. ಪ್ರಹ್ಲಾದ್**
ಪೌಲ್ ಆ್ಯಂಡ್ ರುತ್ ಮ್ಯಾಕ್‌ಕ್ರ್ಯಾಕೆನ್ ಗೌರವಾನ್ವಿತ ವಿಶ್ವವಿದ್ಯಾಲಯ ಪ್ರಾಧ್ಯಾಪಕರು,
ರಾಸ್ ಸ್ಕೂಲ್ ಆಫ್ ಬ್ಯುಜ಼ಿನೆಸ್
ಮಿಚಿಗನ್ ವಿಶ್ವವಿದ್ಯಾಲಯ

ನಿನಗೆ ಅನಂತ ಧನ್ಯವಾದಗಳು ತರುಣ್. ಹೌದು, India@60 - ನಾವು ಬಹಳಷ್ಟು ಸಾಧನೆ ಮಾಡಿದ್ದೇವೆ ಮತ್ತು ಅದನ್ನು ಆಚರಿಸಬೇಕಾಗಿದೆ. ಇಲ್ಲಿ ನ್ಯೂ ಯಾರ್ಕ್‌ನಲ್ಲಿ ಮೋಜಿನಿಂದ ಕೂಡಿದ ವಾರವಿರುತ್ತದೆ ಎಂದು ನಾನು ಬಲ್ಲೆ. ನಾವು ಆಚರಿಸುವ ಸಮಯದಲ್ಲೇ, ನಮ್ಮನ್ನು ನಾವು ಈ ರೀತಿ ಪ್ರಶ್ನಿಸಿಕೊಳ್ಳೋಣ : ಮುಂದೇನು? India@60 ಆಚರಿಸುತ್ತಿರುವಂತೆ, ನಮ್ಮ ಸಾಧನೆಗಳೆಲ್ಲವೂ ನಡೆದು ಹೋದ ಘಟನೆಗಳು ಎಂದು ಸ್ಮರಿಸೋಣ. ಆದರೆ ನಾಯಕತ್ವ, ಭವಿಷ್ಯಕ್ಕೆ ಸೇರಿದ್ದು ಮತ್ತು ಬದಲಾವಣೆಯನ್ನು ಒಳಗೊಳ್ಳುವಂಥದ್ದು. ನಾಯಕತ್ವ ಎಂದರೆ ಆಶಾಕಿರಣ. ಆದ್ದರಿಂದ, ಕಳೆದ 60 ವರ್ಷಗಳನ್ನು ಮೆಲುಕು ಹಾಕುವುದನ್ನು ಬಿಟ್ಟು ನಾನು ಭವಿಷ್ಯದ ಬಗ್ಗೆ ಗಮನ ಕೇಂದ್ರೀಕರಿಸಲು ನಿರ್ಧರಿಸಿದೆ. ಇನ್ನು ನಾನು India@60 ಬಗ್ಗೆ ಯೋಚಿಸುವುದಿಲ್ಲ, India@75 ಬಗ್ಗೆ ಯೋಚಿಸುತ್ತೇನೆ. ಮುಂದಿನ 15 ವರ್ಷಗಳಲ್ಲಿ, ಈ 60 ವರ್ಷಗಳಲ್ಲಿ ಸಾಧಿಸಿದ ಯಶಸ್ಸಿನ ಬುನಾದಿಯ ಮೇಲೆ ನಾವು ಏನನ್ನು ಸಾಧಿಸಬಹುದು ಎನ್ನುವುದರ ಬಗ್ಗೆ ಗಮನ ಹರಿಸುತ್ತೇನೆ. ಮುಖ್ಯವಾಗಿ, ಆ ಅವಧಿಯಲ್ಲಿ ಈ ಸಾಧನೆಗಳಿಗೆ ಕಾರಣವಾದ ಅಂಶಗಳು ಯಾವುವು?

ಒಂದು ಚೇತನಭರಿತ India@75 ನಿರ್ಮಿಸಲು ಒಬ್ಬ ವ್ಯಕ್ತಿಯ ಆಶಾವಾದ, ಒಬ್ಬ ವ್ಯಕ್ತಿಯ ಕಾಳಜಿ ಮತ್ತು ಒಬ್ಬ ವ್ಯಕ್ತಿಯ ಜಾಡು ಯಾವುದು ಎನ್ನುವುದನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. India@75 ಹೇಗಿರಬಹುದು ಎನ್ನುವುದರೊಂದಿಗೆ ಆರಂಭಿಸುತ್ತೇನೆ. ಸಾಮರ್ಥ್ಯದ ಬಗ್ಗೆ ಸ್ಪಷ್ಟತೆ ಇರದಿದ್ದರೆ, ಒಂದು ಕಷ್ಟಕರ ಪ್ರಯಾಣ ಕೈಗೊಳ್ಳುವುದು ಸಾಧ್ಯವಿಲ್ಲ. ಮುಂದೆ ರೂಪಗೊಳ್ಳಲಿರುವ ಜಗತ್ತಿನಲ್ಲಿ ಭಾರತ ಬಹಳ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎನ್ನುವುದು ನನ್ನ ಆಶಯ ಹಾಗು ನಂಬಿಕೆ. ಅಂದರೆ, ಇದು ಸಾಧ್ಯವಾಗಲು, *ಭಾರತ, ಆರ್ಥಿಕ ಬಲ, ತಂತ್ರಜ್ಞಾನ ಮೇಲುಗೈ, ಹಾಗು ನೈತಿಕ ಮುಂದಾಳತ್ವವನ್ನು ವಹಿಸಿಕೊಳ್ಳಬೇಕು.* ಕೇವಲ ಆರ್ಥಿಕ ಬಲ ಹಾಗು ತಂತ್ರಜ್ಞಾನ ಪಕ್ವತೆಗಳಷ್ಟೇ ಸಾಕಾಗುವುದಿಲ್ಲ . ಸೋವಿಯಟ್ ಒಕ್ಕೂಟ ಹಾಗು ಜರ್ಮನಿಯ ನಾಜ಼ಿ ಆಳ್ವಿಕೆಗಳು ಆರ್ಥಿಕ ಬಲ ಹಾಗು ತಂತ್ರಜ್ಞಾನ ಪಕ್ವತೆ ಹೊಂದಿದ್ದನ್ನು ನಾವು ಬಲ್ಲೆವು. ಆದರೆ ವಿಫಲವಾದವು. ನೈತಿಕತೆ ಎನ್ನುವುದು ನಾಯಕತ್ವದ ಒಂದು ಅವಿಭಾಜ್ಯ ಅಂಗ. ಭಾರತ ತನ್ನ ಮುನ್ನಡೆಯಲ್ಲಿ ಅಳವಡಿಸಿಕೊಳ್ಳಬೇಕಾಗುವ ಈ ಮೂರೂ ಅಂಶಗಳ ಬಗ್ಗೆ ಸಮಾನವಾಗಿ ಚಿತ್ರಿಸಲು ಪ್ರಯತ್ನಿಸುತ್ತೇನೆ.

**India@75 ಭಾರತದ ಸಾಮರ್ಥ್ಯ :**

1. ಭಾರತ, ತನ್ನ ಜನಸಂಖ್ಯಾ ಬಲವನ್ನೇ ಒಂದು ವಿಶಿಷ್ಟ ಅನುಕೂಲವನ್ನಾಗಿ ಪರಿವರ್ತಿಸಿಕೊಳ್ಳುತ್ತದೆ. 200 ದಶಲಕ್ಷ ಕಾಲೇಜ್ ಪದವೀಧರರ ಬದ್ಧ ಬುನಾದಿ ನಿರ್ಮಿಸುವ ಸಾಮರ್ಥ್ಯ ಭಾರತಕ್ಕಿದೆ. ಅಂದರೆ, ಪ್ರತಿಯೊಂದು ಕ್ಷೇತ್ರದಲ್ಲೂ ಸುಶಿಕ್ಷಿತ ಜನರ ಪಡೆ ಇರುತ್ತದೆ. ಆದರೆ ಈ ಸಂಖ್ಯೆ, ಭಾರತದ ಒಟ್ಟು ಜನಸಂಖ್ಯೆಯ 16% ಮಾತ್ರ. ಮುಂದುವರಿದು, ಈ ಸಂಖ್ಯೆ 500 ದಶಲಕ್ಷ ಪ್ರಮಾಣಿತ ಹಾಗು ಕುಶಲ ತಂತ್ರಜ್ಞಾನಿಗಳಾಗಿ ಪರಿವರ್ತನೆಯಾಗುವುದನ್ನು ನಾನು ನೋಡಬಯಸುತ್ತೇನೆ. ಈ ಭವಿಷ್ಯದ ಚಿತ್ರಣದಲ್ಲಿ ಸಾರ್ವತ್ರಿಕ ಶಿಕ್ಷಣ ಅಡಕವಾಗಿದೆ. ಈ ಗುರಿಯ ಬಗ್ಗೆ ನಮ್ಮ ನಾಯಕರು ಪ್ರಥಮ ಆದ್ಯತೆ ನೀಡುವಂತಾದರೆ,[1] ಹದಿನೈದು ವರ್ಷಗಳಲ್ಲಿ ಇದು ಸಾಧ್ಯವಾಗುತ್ತದೆ. ಇದರ ಅರ್ಥ ಏನೆಂದು ಅವಲೋಕಿಸಿ. ಮುಂದಿನ ವರ್ಷಗಳಲ್ಲಿ, ಪ್ರಪಂಚದ ಯಾವುದೇ ರಾಷ್ಟ್ರಕ್ಕೆ ಹೋಲಿಸಿದರೂ, ಭಾರತ, ತಾಂತ್ರಿಕವಾಗಿ ತರಬೇತಿ ಪಡೆದ ಅಗಾಧ ಮಾನವ ಸಂಪನ್ಮೂಲ ಆಸ್ತಿಯನ್ನು ಹೊಂದಿರುತ್ತದೆ. ಇದು ಜಾಗತಿಕ ನಾಯಕತ್ವದತ್ತ ಪ್ರಥಮ ಹೆಜ್ಜೆಯಾಗಬೇಕು. ಒಂದೊಮ್ಮೆ ತನ್ನ ಶೈಕ್ಷಣಿಕ ಕಾರ್ಯೋದ್ದೇಶದಲ್ಲಿ ಭಾರತ ವಿಫಲವಾದರೆ, ನನ್ನ ಸುಂದರ, ಬಲಿಷ್ಟ ಭಾರತದ ಕನಸು ನನಸಾಗಲು ಸಾಧ್ಯವಿಲ್ಲ.

2. ಫಾರ್ಚ್ಯೂನ್ 100 ಸಂಸ್ಥೆಗಳ ಪಟ್ಟಿಯಲ್ಲಿ, ಭಾರತದ ಕನಿಷ್ಟ 30 ಸಂಸ್ಥೆಗಳು ಸ್ಥಾನ ಪಡೆಯಬೇಕು. ಇದು ಬಹಳ ಉದ್ಧತಟನದ ಗುರಿ ಎಂದು ಬಲ್ಲೆ, ಆದರೆ ಸಾಧ್ಯ.

3. ಒಟ್ಟಾರೆ ಜಾಗತಿಕ ವ್ಯಾಪಾರದಲ್ಲಿ ಭಾರತದ ಕೊಡುಗೆ 10%. ಭಾರತದಿಂದ ಸಾಧ್ಯವಿದೆ. ಅದಕ್ಕೆ ನಾವು ನಮ್ಮ ಆಲೋಚನೆಯ ದಿಕ್ಕನ್ನು ಬದಲಾಯಿಸಬೇಕು. 1997ರ ಏಷಿಯಾದ ಗಂಭಿರ ಪರಿಸ್ಥಿತಿಯ ಸಮಯದಲ್ಲಿ ಭಾರತಕ್ಕೆ ಹಿನ್ನಡೆಯಾಗಲಿಲ್ಲ ಎನ್ನುವುದನ್ನು ಭಾರತೀಯರು ಹೆಮ್ಮೆಯ ಸಂಗತಿ ಎಂದು ತಿಳಿಯುತ್ತೇವೆ. ಆ ಸಮಯದಲ್ಲಿ, ನಾನು ಹೇಳಿದ್ದೆ, ಭಾರತ ಜಗತ್ತಿನ ಇತರ ಭಾಗಗಳೊಂದಿಗೆ ಸಂಪರ್ಕ ಹೊಂದಿದ್ದರೆ, ಆ ಪರಿಸ್ಥಿತಿಯ ಬಿಸಿ ಭಾರತಕ್ಕೂ ತಟ್ಟುತ್ತಿತ್ತು. ಭಾರತ ಜಗತ್ತಿನ ಇತರ ಭಾಗಗಳೊಂದಿಗೆ ಜೋಡಣೆಗೊಳ್ಳಬೇಕು–ಇತರರನ್ನು ಪ್ರಭಾವಕ್ಕೆ ಒಳಪಡಿಸಲು ಇದು ಪ್ರಮುಖ ಹೆಜ್ಜೆ ಮತ್ತು ಮುಖ್ಯವಾಗಿ ಇತರರಿಂದ ಕಲಿಯುವುದಕ್ಕೆ ಅವಕಾಶ.
4. ಭಾರತ ಜಾಗತಿಕ ಪರಿಶೋಧನೆಗಳ – ಹೊಸ ವ್ಯಾಪಾರಗಳು, ಹೊಸ ತಂತ್ರಜ್ಞಾನಗಳು ಮತ್ತು ಹೊಸ ವ್ಯಾಪಾರ ಮಾದರಿಗಳ–ಮೂಲವಾಗುತ್ತದೆ. ಇದರ ಆರಂಭಿಕ ಸಾಕ್ಷಿ ಈಗಾಗಲೇ ಕಣ್ಣಿಗೆ ಬಿದ್ದಿದೆ. ಭಾರತ ಈಗ ಹೆಚ್ಚು ಹೆಚ್ಚು ಹೊಸ ವ್ಯಾಪಾರ ಮಾದರಿಗಳಿಗೆ ನೆಲೆಯಾಗುತ್ತಿದೆ–ತೀರಾ ಕಡಿಮೆ ಬಂಡವಾಳ ಒತ್ತಡ, ತೀರಾ ಕಡಿಮೆ ನಿಶ್ಚಿತ ವೆಚ್ಚಗಳು ಮತ್ತು ನಿಶ್ಚಿತ ವೆಚ್ಚಗಳನ್ನು ಬದಲಾಯಿಸುವ ವೆಚ್ಚವಾಗಿ (ಏರ್‌ಟೆಲ್ ಸಂದರ್ಭದಲ್ಲಿರುವಂತೆ) ಪರಿವರ್ತನೆ ಮಾಡುವುದು. ಈ ಪಿರಾಮಿಡ್‌ನ ಅತ್ಯಂತ ತಳಭಾಗದಲ್ಲಿರುವ 800 ದಶಲಕ್ಷ ಭಾರತೀಯರು ಆವಿಷ್ಕಾರ ಪರಿಶೋಧನೆಗಳ[ii] ಬೃಹತ್ ಮೂಲವಾಗಬಹುದು.
5. ಭಾರತವು, ಕಲೆ, ವಿಜ್ಞಾನ ಮತ್ತು ಸಾಹಿತ್ಯದ ವಿಕಸನದತ್ತ ಗಮನ ಕೇಂದ್ರೀಕರಿಸಬೇಕಾಗಿದೆ. ಭಾರತ ಏಕೆ ಹತ್ತು ನೋಬೆಲ್ ಪ್ರಶಸ್ತಿ ವಿಜೇತರನ್ನು ಹೊಂದಿರಬಾರದು? ಭಾರತೀಯರು ಎಲ್ಲೋ ಮಾಡಿದ ಕೆಲಸಗಳಿಗಾಗಿ ನೋಬೆಲ್ ಪ್ರಶಸ್ತಿ ಪಡೆಯುವುದಲ್ಲದೆ–ಭಾರತದಲ್ಲಿ ಮಾಡಿದ ಕೆಲಸಗಳಿಗಾಗಿ ಅವು ನೀಡಲಾದರೆ ಇನ್ನಷ್ಟು ಉತ್ತಮ ಎಂದು ನಾನು ಸೇರಿಸಲಿಚ್ಛಿಸುತ್ತೇನೆ.
6. ವೈವಿಧ್ಯತೆಯನ್ನು ಯಾವ ರೀತಿ ನಿಭಾಯಿಸಬೇಕು ಎಂಬುದಕ್ಕೆ ಭಾರತ ವಿಶ್ವದ ಬೆಂಚ್‌ಮಾರ್ಕ್ ಆಗಿರುತ್ತದೆ. ವಿಶ್ವವ್ಯಾಪಕತೆ ಮತ್ತು ಅಂತರ್ವೇಶನದ ಆಚರಣೆಗೆ ಅದು ಬೆಂಚ್‌ಮಾರ್ಕ್ ಆಗುತ್ತದೆ. ಎಲ್ಲಾ ರೀತಿಯ ವೈವಿಧ್ಯತೆಯನ್ನು ನಿರೀಕ್ಷಿಸಬಹುದಾದ ಎಲ್ಲಾ ಪ್ರಮುಖ ಧರ್ಮಗಳು, 15 ಪ್ರಮುಖ ಭಾಷೆಗಳು, ಮತ್ತು ನೂರಾರು ಆಡುಭಾಷೆಗಳು ಹಾಗು ಸಂಸ್ಕೃತಿ, ಆಹಾರ ಪದ್ಧತಿ ಮತ್ತು ಸಂಪ್ರದಾಯಗಳ ಸಂಕೀರ್ಣ ಶ್ರೇಣಿಗೆ ಭಾರತ ನೆಲೆಯಾಗಿರುವುದರಿಂದ ಅದಕ್ಕೆ ಹೆಚ್ಚು ಅವಕಾಶಗಳಿವೆ. ವೈವಿಧ್ಯತೆ ಹಾಗು ಅಂತರ್ನಿವೇಶನವನ್ನು ಆಚರಣೆ ಮಾಡಲು ಭಾರತ ಒಂದು ಪ್ರಯೋಗಾಲಯವಾಗದಿದ್ದರೆ ಬೇರಾರಿಗೂ ಅದು ಸಾಧ್ಯವಿಲ್ಲ. *ಭಾರತ, ಇಡೀ ವಿಶ್ವಕ್ಕೆ ಒಂದು ಪ್ರಯೋಗಾಲಯ.*

ಈ ಪಟ್ಟಿಗೆ ಇನ್ನಷ್ಟೂ ಸೇರಿಸುತ್ತಲೇ ಹೋಗಬಹುದು. ನಾನು ಗುರುತಿಸಿರುವ ಆರು ದೊಡ್ಡ ಅವಕಾಶಗಳು, ಸದುಪಯೋಗಗೊಂಡಾಗ, ವಿಶ್ವದಲ್ಲಿ ಭಾರತದ ಪ್ರಭಾವವನ್ನು ಬದಲಾಯಿಸಬಹುದಾಗಿದೆ. ಭಾರತಕ್ಕೆ ಆ ಸಾಮರ್ಥ್ಯವಿದೆ. ಈ ಸಾಮರ್ಥ್ಯ ನಿಮ್ಮಲ್ಲಿ ಆಸಕ್ತಿ ಹುಟ್ಟಿಸಿದರೆ, ನಾವು ಮುಂದಿನ ಆಸಕ್ತಿಪೂರ್ಣ ಪ್ರಶ್ನೆಗೆ ಹೋಗಬಹುದು. ನಾವು ಅಲ್ಲಿ ತಲುಪುವುದು ಹೇಗೆ? ಆರಂಭಕ್ಕೆ ನಾವು ಯಾವ ನೀತಿಗಳನ್ನು ಹೊಂದಿರಬೇಕು?

## ಮೂಲ ನೀತಿ

ನಾನು ಮೂರು ನೀತಿಗಳ ಸಲಹೆ ನೀಡಬಯಸುತ್ತೇನೆ. ಮೊದಲನೆಯದು, ವ್ಯಾಪಾರೀ ಪರಿವರ್ತನೆಯ ಸಾರಕ್ಕೆ ಸಂಬಂಧಿಸಿದ್ದು. ಇಂಡಿಯಾ@75ದಲ್ಲಿನ ಸಾಮರ್ಥ್ಯವನ್ನು ವಾಸ್ತವಗೊಳಿಸಲಾಗದು ಎಂದು ಇಲ್ಲಿರುವ ಅನೇಕರು ಹೇಳಬಹುದು ಎಂದು ನನಗೆ ತಿಳಿದಿದೆ, ಏಕೆಂದರೆ ನಮ್ಮ ಬಳಿ ಸಂಪನ್ಮೂಲಗಳಿಲ್ಲ. ಏಳು ವರ್ಷಗಳ ಹಿಂದೆ 10% ಬೆಳವಣಿಗೆಯ ಸಲಹೆಯನ್ನು ನಾನು ನೀಡಿದುದು ನನಗೆ ನೆನಪಿದೆ. ಅತ್ಯಂತ ಹಿರಿಯ ಮತ್ತು ಅತಿ ಮೇಧಾವಿ ರಾಜಕರಣಿಗಳೂ ಸೇರಿದಂತೆ ಭಾರತದಲ್ಲಿ ಅನೇಕ ಮಂದಿ, 10% ಬೆಳವಣಿಗೆ ಸಾಧಿಸುವಷ್ಟು ಸಂಪನ್ಮೂಲ ಇಲ್ಲ ಎಂದು ಹೇಳಿದ್ದರು. ಆದರೆ ಇಲ್ಲಿರುವ ಸಮಸ್ಯೆ ಸಂಪನ್ಮೂಲದ್ದಲ್ಲ, *ಆದರೆ ಆಸೆಗಳು ಮತ್ತು ಸಂಪನ್ಮೂಲಗಳ ನಡುವಿನ ಸಮತೋಲನ.* ಈ ಕೋಣೆಯಲ್ಲಿರುವ ಪ್ರತಿಯೊಬ್ಬ ವ್ಯಾಪಾರಿಗೂ, ಪರಿಶೋಧನೆ ಮತ್ತು ವ್ಯಾಪಾರದ ಶಕ್ತಿಯನ್ನು ಸೃಷ್ಟಿಸುವುದು ಆಸೆಗಳು ಮತ್ತು ಸಂಪನ್ಮೂಗಳ ನಡುವಿನ ಉದ್ದೇಶಪೂರ್ವಕ ಅಸಮತೋಲನ ಎಂಬುದನ್ನು ತಿಳಿದಿದೆ. ಒಂದು ದೇಶವಾಗಿ, ಭಾರತ ಉನ್ನತ ಮತ್ತು ಹಂಚಿಕೊಂಡ ಆಶೋತ್ತರಗಳನ್ನು ಹೊಂದಿರಬೇಕು. ಒಂದು ದೇಶವಾಗಿ ಹಿಂದಿನ ಬಾರಿ 1929 ರಲ್ಲಿ

ಆಕೆ ಹಂಚಿಕೊಂಡ ಆಶೋತ್ತರವೆಂದರೆ ಆಗಿನ ಕಾಂಗ್ರೆಸ್ ಪಕ್ಷದ ನಾಯಕರು "ಪೂರ್ಣ ಸ್ವರಾಜ್ಯ" ನಮ್ಮ ಧ್ಯೇಯೋದ್ದೇಶ ಎಂದು ಘೋಷಿಸಿದಾಗ. ಅಂದಿನಿಂದ, ಪ್ರತಿಯೊಬ್ಬ ಭಾರತೀಯನೂ ಹಂಚಿಕೊಳ್ಳಬಲ್ಲಂತಹ ರಾಷ್ಟ್ರೀಯ ಆಶೋತ್ತರಗಳನ್ನು ಭಾರತ ಹೊಂದಿಲ್ಲ. ಹಂಚಿಕೊಂಡ ಆಶೋತ್ತರಗಳು ಭಾರತವನ್ನು ಬದಲಾಯಿಸಲು ಅನಿವಾರ್ಯವಾಗಿದೆ. ಲಭ್ಯವಿರುವ ಸಂಪನ್ಮೂಲಗಳಿಗಿಂತ ಹೆಚ್ಚಿನದಾದ ಆಶೋತ್ತರಗಳನ್ನು ಸಾಧಿಸಿಕೊಳ್ಳಲು ಎರಡು ವಿಧಾನಗಳಿವೆ– ಒಂದು ಸಂಪನ್ಮೂಲಗಳನ್ನು ಮೇಲಕ್ಕೆತ್ತುವುದು–ಪ್ರತಿಯೊಬ್ಬ ವ್ಯಕ್ತಿಗೆ ಮತ್ತು ನೀವು ವ್ಯಯಿಸುವ ಪ್ರತಿ ರೂಪಾಯಿಗಿಂತ ಹೆಚ್ಚಿಗೆ ಪಡೆಯುವುದು. ಪರ್ಯಾಯವಾಗಿ ಮಾಡಬಹುದಾದ ಮತ್ತೊಂದು ಸಂಗತಿ ಎಂದರೆ ಆಟವನ್ನೇ ಬದಲಾಯಿಸಿ, ಅದನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವುದು. ಇದು ಗಾಂಧೀಜಿಯವರ ಸಾಮರ್ಥ್ಯ. ಬ್ರಿಟಿಷರ ವಿರುದ್ಧ ಸಾಂಪ್ರದಾಯಿಕ ಶಸ್ತ್ರಸಜ್ಜಿತ ಹೋರಾಟವಲ್ಲ, ಆದರೆ ಶಾಂತಿಯುತವಾದ ಸತ್ಯಾಗ್ರಹ. ಮೊದಲನೆಯದಷ್ಟೇ ಮುಖ್ಯವಾದ ಎರಡನೇಯ ನೀತಿ ಎಂದರೆ, 60 ವರ್ಷಗಳಿಗೆ ಮೊದಲು ಅಥವಾ ಅಷ್ಟೇ ಏಕೆ, 10 ವರ್ಷಗಳಿಗೆ ಮೊದಲು ನಾವು ಮಾಡಿದುದನ್ನು ಬಹಿರ್ಗಣಿಸುವ ಮೂಲಕ, ಇಂಡಿಯಾ @75ರ ಸಾಮರ್ಥ್ಯವನ್ನು ನಾವು ಪಡೆಯುವುದು ಸಾಧ್ಯವಿಲ್ಲ ಎಂಬುದನ್ನು ಮನಗಾಣುವುದು. *ಇಲ್ಲಿಂದ (ಪ್ರಸ್ತುತ ಸ್ಥಿತಿ) ನೀವು ಅಲ್ಲಿಗೆ (ಇಂಡಿಯಾ@75) ಹೋಗುವುದು ಸಾಧ್ಯವಿಲ್ಲ*. ನಾನು ಮೊದಲು ವಿವರಿಸಿದ ಇಂಡಿಯಾ @75ಅನ್ನು ನೀವು ಕಲ್ಪಿಸಿಕೊಳ್ಳಬೇಕು, ನಂತರ ಆ ಭವಿಷ್ಯದ ಅನಾವರಣ ಮಾಡಬೇಕು. ಭೂತಕಾಲವನ್ನು ಬಹಿರ್ಗಣಿಸುವ ಬದಲು ಭವಿಷ್ಯವನ್ನು ಅನಾವರಣಗೊಳಿಸುವುದು ಮೂಲ ವಿಷಯ. ನಾನು ಇಂಡಿಯಾ@75ರ ಸಾಮರ್ಥ್ಯವನ್ನು ವಿವರಿಸಲಾರಂಭಿಸಿದ ಕಾರಣವೇ ಅದು. ಆದರೆ ಇಲ್ಲಿಂದ ಅಲ್ಲಿಗೆ ನಾವು ಒಂದೇ ಹೆಜ್ಜೆಯಲ್ಲಿ ತಲುಪಬೇಕು ಎಂಬುದು ಇದರ ಅರ್ಥವಲ್ಲ. ನಾವು ಚಿಕ್ಕದಾದ ಮತ್ತು ಸ್ಪಷ್ಟವಾದ ಹೆಜ್ಜೆಗಳನ್ನು, ಸರಿಯಾದ ನಿಟ್ಟಿನಲ್ಲಿ ಇಡಬೇಕು. ಇಲ್ಲಿ ಕೆಲವು ಹೆಜ್ಜೆಗಳು ಪ್ರಾಯೋಗಿಕವಾಗಿರಬಹುದು. ನಾವು ಸಣ್ಣ ಹೆಜ್ಜೆಯಿರಿಸಿದರೂ ಅವಸರ ಹಾಗು ಉದ್ದೇಶಪೂರಿತವಾದ ಹೆಜ್ಜೆಗಳನ್ನಿಟ್ಟು ಚಲಿಸಬೇಕು. ಮೂರನೆಯದಾಗಿ, ಕೇವಲ ಅತ್ಯುತ್ತಮ ಪದ್ಧತಿಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸಬೇಡಿ. ಪ್ರತಿಯೊಬ್ಬರೂ ಪ್ರತಿಯೊಬ್ಬರನ್ನೂ ಬೆಂಚ್‌ಮಾರ್ಕ್ ಮಾಡಿದರೆ, ನಾವು ಸಾಮಾನ್ಯ ಮಧ್ಯಮ ಸ್ಥಿತಿಯತ್ತ ವಾಲುತ್ತಿರುತ್ತೇವೆ. ಆದ್ದರಿಂದ ಮುಂದಿನ ಪದ್ಧತಿಗಳ ಮೇಲೆ ಗಮನ ಕೇಂದ್ರೀಕರಿಸಬೇಕು ಎಂದು ನಾನು ಸಲಹೆ ನೀಡುತ್ತಿದ್ದೇನೆ. ಅಂದರೆ, ನಾವು ದುರ್ಬಲವಾದ ಸಿಗ್ನಲ್‌ಗಳನ್ನು ಬೃಹತ್ತ್‌ಗೊಳಿಸಿ, ಅವಕಾಶಗಳ ಹೊಸ ಮಾದರಿ ಪರಿಕಲ್ಪಿಸಿ, ಅವುಗಳ ಬೆನ್ನು ಹತ್ತಿ ಹೋಗುವ ಧೈರ್ಯವನ್ನು ಹೊಂದಿರಬೇಕು.

ಈ ಮೂರು ನೀತಿಗಳು ಬಹಳ ಸರಳವಾಗಿವೆ, ಆದರೆ ಭಾರತವನ್ನು ಪುನಶ್ಚೇತನಗೊಳಿಸಲು ಅತ್ಯಂತ ಬಲಿಷ್ಠವಾದ ಕ್ರಮಬದ್ಧತೆಯಾಗಿವೆ. ನಾವು ಇದನ್ನು ಇವುಗಳಿಂದ ಆರಂಭಿಸಬೇಕು:

ಅ. ಆಶೋತ್ತರಗಳು > ಸಂಪನ್ಮೂಲಗಳು
ಆ. ಭವಿಷ್ಯವನ್ನು ಅನಾವರಣಗೊಳಿಸುವುದು
ಇ. ಮುಂದಿನ ಪದ್ಧತಿಗಳ ಮೇಲೆ ಗಮನ ಕೇಂದ್ರೀಕರಿಸುವುದು

ಈ ನೀತಿಗಳನ್ನು ಪಾಲಿಸಲು, ಇಲ್ಲಿ ಮತ್ತು ಈಗ ಎರಡನ್ನೂ ಆಲೋಚಿಸಿ, ಖಂಡಿತವಾಗಿ ಭವಿಷ್ಯದ ಕುರಿತು ವಿಭಿನ್ನವಾಗಿ ಆಲೋಚಿಸುವುದು ಅಗತ್ಯವಾಗುತ್ತದೆ. ಇದು ನಮ್ಮನ್ನು ಒಂದು ನಿರ್ದಿಷ್ಟ ದೃಷ್ಟಿಕೋನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಒತ್ತಾಯಿಸುತ್ತದೆ. ಹಂಚಿಕೊಂಡ ದೃಷ್ಟಿಕೋನವಿಲ್ಲದೆ ಭಾರತಕ್ಕೆ ಧೈರ್ಯವಾದ ಮತ್ತು ಶಕ್ತಿಶಾಲಿಯಾದ ಭವಿಷ್ಯವನ್ನು ಸೃಷ್ಟಿಸುವುದು ಸಾಧ್ಯವಿಲ್ಲ. ವೃದ್ಧ್ಯಂಶ ಮನೋಭಾವವಿಟ್ಟುಕೊಂಡು ನಾವು ಅಲ್ಲಿ ಹೋಗುವುದು ಸಾಧ್ಯವಿಲ್ಲ. ನಾವು ಕೇವಲ ಬ್ಯಾಂಡ್–ಏಯ್ಡ್ ಪರಿಹಾರಗಳನ್ನು ಪ್ರಯತ್ನಿಸುವುದು ಬೇಡ. ಕ್ರಿಯಾಶೀಲತೆ, ನಾವೀನ್ಯತೆ, ಮತ್ತು ವ್ಯಾಪಾರೀತನದ ಮೂಲಕ ಬೆಂಬಲ ಪಡೆದ ಆಶೋತ್ತರಗಳಿಗೆ ಹಂಚಿಕೊಂಡ ಬದ್ಧತೆಯನ್ನು ಸೃಷ್ಟಿಸುವ ಮೂಲಕ ವಿಶ್ವದಲ್ಲಿ ನಾಯಕನಾಗುವ ಕಾಯಕವನ್ನು ನಾವು ಆರಂಭಿಸಬೇಕು.

**ಅಭಿವೃದ್ಧಿ ಸಂದರ್ಭ**

ನಾವು ಎಂತಹ ಸಾಮಾಜಿಕ–ರಾಜಕೀಯ ಮತ್ತು ಆರ್ಥಿಕ ಸಂದರ್ಭದಲ್ಲಿ ಇದನ್ನು ಸಾಧಿಸಬೇಕಾಗುತ್ತದೆ? ಮುಂದಿನ 10–15 ವರ್ಷಗಳಲ್ಲಿ ಭಾರತದಲ್ಲಿ ಈ ಚರ್ಚೆ ಶೀಘ್ರವಾಗಿ ಬದಲಾಗುತ್ತದೆ ಎಂದು ನಾನು ನಂಬಿದ್ದೇನೆ. ನಾನು ಆರು ಕ್ಷೇತ್ರಗಳನ್ನು ಗುರುತಿಸಿದ್ದು, ಚರ್ಚೆಯ ನಿಟ್ಟು ಮತ್ತು ಅದರ ನಿರ್ಧಾರಗಳು ಭಾರತವು ತನ್ನ ಸಾಮರ್ಥ್ಯವನ್ನು ತೋರ್ಪಡಿಸಿಕೊಳ್ಳುವುದಕ್ಕೆ ಅತಿ ಮುಖ್ಯವಾಗಿರುತ್ತವೆ. ಇಲ್ಲಿ ಪರಿಗಣಿಸಬೇಕಾಗಿರುವ ಕ್ಷೇತ್ರಗಳೆಂದರೆ:

1. ತೀರಾ ಬಡತನದಿಂದ ಹಿಡಿದು, ವರಮಾನ ಅಸಮಾನತೆಯವರೆಗೆ ಬದಲಾವಣೆ
2. ಆದಾಯ ಮಟ್ಟದಿಂದ ಜೀವನ ಶೈಲಿ ಪರಿಮಾಣಗಳವರೆಗಿನ ಬದಲಾವಣೆ; ಆಶೋತ್ತರಗಳ ವಿಶ್ವವ್ಯಾಪಕತೆ
3. ದರ–ಕಾರ್ಯಪ್ರದರ್ಶನ ಚಟುವಟಿಕೆಯನ್ನು ಬದಲಾಯಿಸುವುದು
4. ಕಡಿಮೆ ತಂತ್ರಜ್ಞಾನ ಪರಿಹಾರದಿಂದ ಹಿಡಿದು, ಉನ್ನತ ತಾಂತ್ರಿಕ ಪರಿಹಾರಗಳಿಗೆ ಜಾಗತಿಕ ಪ್ರವೇಶಾವಕಾಶದವರೆಗೆ
5. ಪರಿಸರ ಉತ್ತೇಜನಕ್ಕೆ ಉತ್ಪನ್ನ ಹಾಗು ಉದ್ಯೋಗಗಳ ಮೀಸಲಾತಿ
6. ಆಡಳಿತದ ಮೇಲೆ ಗಮನ ಕೇಂದ್ರೀಕರಣ

ಮೂಲತಃ, ಈ ಪ್ರಶ್ನೆಗಳನ್ನು ಒಟ್ಟಾರೆಯಾಗಿ ತೆಗೆದುಕೊಂಡರೆ, ಭಾರತದಂತಹ ಅತಿದೊಡ್ಡ, ಸಂಕೀರ್ಣ ಮತ್ತು ಬಹುತ್ವ ಸಿದ್ಧಾಂತದ ದೇಶದ ಆರ್ಥಿಕ ಬೆಳವಣಿಗೆಗೆ ಒಂದು ಹೊಸ ಮಾದರಿ ನೀಡುತ್ತದೆ. ಬೆಳವಣಿಗೆಯ ಈ ಮಾದರಿಯನ್ನು ಮುಂದಿನ ಪದ್ಧತಿಗಳು ಎಂದು ಅತ್ಯುತ್ತಮವಾಗಿ ವಿವರಿಸಬಹುದು ಏಕೆಂದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ, ಇದನ್ನು ಈವರೆಗೆ ಬೇರೆಲ್ಲಿಯೂ ಪ್ರಯತ್ನಿಸಲಾಗಿಲ್ಲ. ಮಾದರಿಗಳಿಗಾಗಿ, ಭಾರತದಾಚೆ ನೋಡುವ ಬದಲು (ಅತ್ಯುತ್ತಮ ಪದ್ಧತಿಗಳನ್ನು ಬೆಂಚ್‌ಮಾರ್ಕ್ ಮಾಡುವುದು) ಅದರೊಳಗೇ ನೋಡಿ ಅವಳ ಅಪಾರ ಸಾಮರ್ಥ್ಯದಿಂದ (ಸ್ವಾತಂತ್ರ್ಯ ಚಳುವಳಿಯಲ್ಲಿ ಮಾಡಿದಂತೆ), ಪಾಠಕಲಿಯಲು ಇದು ನಮಗೆ ಪ್ರೇರೇಪಣೆ ನೀಡಬೇಕು. ಆರ್ಥಿಕ ಅಭಿವೃದ್ಧಿಯ ಮುಂದಿನ ಪದ್ಧತಿಯನ್ನು ನಾವು ಪರಿಶೋಧಿಸುವ ಅಗತ್ಯವಿದೆ. ಭಾರತದ ಅಭಿವೃದ್ಧಿಯ ಮುಂದಿನ ಘಟ್ಟಕ್ಕೆ ಅರ್ಥವನ್ನು ಒದಗಿಸುವ ಈ ಮೆಗಾ ಟ್ರೆಂಡ್‌ಗಳಲ್ಲಿ ಒಂದೊಂದಾಗಿ ನಾನು ಪರಿಶೀಲಿಸುತ್ತೇನೆ:

*1. ತೀರಾ ಬಡತನದಿಂದ ವರಮಾನ ಅಸಮಾನತೆಯವರೆಗೆ:*

ಕಳೆದ ದಶಕದಿಂದ ಭಾರತ ಗಣನೀಯವಾಗಿ ಕಡುಬಡತನವನ್ನು ಕಡಿಮೆ ಮಾಡಿದೆ. ಆದರೂ, ದಿನಕ್ಕೆ 1 ಡಾಲರ್‌ಗಿಂತ ಕಡಿಮೆ ವರಮಾನದಲ್ಲಿ ಜೀವನ ಸಾಗಿಸುತ್ತಿರುವ ಭಾರತೀಯರ ಸಂಖ್ಯೆ 380.6 ದಶಲಕ್ಷ. ದಿನಕ್ಕೆ 1 ಡಾಲರ್‌ಗಿಂತ ಕಡಿಮೆ ವರಮಾನದಲ್ಲಿ " ಜೀವನೋಪಾಯ"ದ "ಕಡುಬಡತನ"ಬದುಕು, ಮುಂದಿನ 15 ವರ್ಷಗಳಲ್ಲಿ ಮತ್ತಷ್ಟು ಕಡಿಮೆಯಾಗುತ್ತದೆ ಎಂದು ನ್ಯೈಜ್ಯವಾಗಿ ಅಂದಾಜು ಮಾಡಬಹುದು.

India@75.ನಲ್ಲಿ ಕಡುಬಡತನ, ಭಾರತದ ಪ್ರಮುಖ ಕಾಳಜಿಯಾಗಿರಲಾರದು. ಆದರೂ, ಅದರ ಜಾಗದಲ್ಲಿ ಇನ್ನೂ ಹೆಚ್ಚಿನ ಸಮಸ್ಯೆ ತಲೆದೋರಬಹುದು. ತ್ವರಿತ ಆರ್ಥಿಕ ಅಭಿವೃದ್ಧಿ ಹಾಗು ಆರ್ಥಿಕತೆಯ ಜಾಗತೀಕರಣದ ಒಂದು ಪ್ರಮುಖ ಪ್ರಭಾವವೆಂದರೆ, ಮೂಡಲಿರುವ ಲಾಭಗಳಲ್ಲಿ ಕೊರತೆ ಹಾಗು ಅಸಮತೋಲನ. ಸಮಾಜದ ಕೆಲವು ವರ್ಗಗಳಿಗೆ ಲಾಭವಾದರೆ (ಐಟಿ ಉದ್ದಿಮೆಯಲ್ಲಿ ಕೆಲಸ ಮಾಡುವವರು), ಇನ್ನು ಕೆಲವರು (ಗ್ರಾಮೀಣ ಭಾರತದ ಅನಕ್ಷರಸ್ಥ ಕೂಲಿಕಾರ್ಮಿಕರು) ಹಿಂದುಳಿಯುತ್ತಾರೆ. ಈ ಅಸಮಾನತೆಯಿಂದಾಗಿ ಸಮಾಜದಲ್ಲಿ ಬಹುವಿಧದ ಹೊಸ ವಿಭಜನೆ ಸೃಷ್ಟಿಯಾಗುತ್ತದೆ–ಶಿಕ್ಷಿತರ ಹಾಗು ಅನಕ್ಷರಸ್ಥರ ನಡುವಿನ ವಿಭಜನೆ, ಗ್ರಾಮೀಣ ಹಾಗು ನಗರ ಜನಸಂಖ್ಯೆ, ದೇಶದ ಪ್ರದೇಶಗಳ ನಡುವೆ ವಿಭಜನೆ ಹಾಗು ಜನಾಂಗೀಯ ವಿಭಜನೆ. ಇದರ ಪರಿಣಾಮವಾಗಿ, ವರಮಾನ ಅಸಮಾನತೆಯು ಸಾಮಾಜಿಕ ಘರ್ಷಣೆಗೆ ಮೂಲವಾಗುತ್ತದೆ. ಇದು ಕೇವಲ ಭಾರತಕ್ಕೆ ಸೀಮಿತವಾದ ದೃಶ್ಯವಲ್ಲ. ಚೀನಾ, ಬ್ರೆಜಿಲ್ ಹಾಗು ದ.ಆಫ್ರಿಕಾದಂಥ ತ್ವರಿತವಾಗಿ ಉಗಮಗೊಳ್ಳುತ್ತಿರುವ ಆರ್ಥಿಕತೆಗಳ ವಿಷಯದಲ್ಲೂ ಇದು ನಿಜ. ಅಮೇರಿಕದಲ್ಲಿರುವಂತೆ ತ್ವರಿತ ರಚನಾತ್ಮಕ ಮಾರ್ಪಾಡು ಹೊಂದುತ್ತಿರುವ ಬೃಹತ್ ಆರ್ಥಿಕತೆಗಳ ವಿಷಯದಲ್ಲೂ ಇದು ನಿಜ. ಕೆಳಗಿನ ಕೋಷ್ಟಕ 1, ಜಿನಿ ಗುಣಾಂಕದ ಪ್ರಕಾರ ಮಾಪಿಸಲಾದ ಏರುತ್ತಿರುವ ಅಸಮಾನತೆಯನ್ನು ಸೂಚಿಸುತ್ತದೆ.

**ಅಸಮಾನತೆಯ ಮಾಪನ:**

**ಜಿನಿ ಗುಣಾಂಕ:**

| | ಅಮೇರಿಕ | ಚೀನಾ | ಭಾರತ | ಬ್ರೆಜ಼ಿಲ್ | ದ.ಆಫ್ರಿಕ |
|---|---|---|---|---|---|
| 1985-1986 | 41.6 | 22.4 | 32.0 | 59.3 | |
| 1989-1991 | 42.7 | 34.1 | 32.1 | 64.0 | |
| 1995-1996 | 45.0 | 39.0 | 33.8 | 60.2 | |
| 1999-2001 | 46.3 | 42.0 | 36.0 | 59.6 | |
| 2006 | 46.9 | 47.0 | 39.5 | 57.2 | 59.0+ |
| GNI/capita PPP | $43,555 | 7,600 | 3,800 | 8,600 | 13,000 |
| ಹೆಚ್‌ಡಿ ಸೂಚ್ಯಂಕದಲ್ಲಿ 200 ಸ್ಥಾನ (177) | 8 | 81 | 126 | 69 | 121 |

ತ್ವರಿತ ಆರ್ಥಿಕ ಬೆಳವಣಿಗೆಯಿಂದ ಹಾಗು ಆರ್ಥಿಕತೆಯಲ್ಲಿ ಮೂಲಭೂತ ಸಂರಚನೆಯ ಬದಲಾವಣೆಗಳಿಂದ ವರಮಾನ ಅಸಮಾನತೆ ಏರ್ಪಡುತ್ತದೆ ಎಂದು ನಾವಿಲ್ಲಿ ಕಾಣಬಹುದು. ಇದಕ್ಕೆ ಯು ಎಸ್ ಎ ಸಹ ಹೊರತಲ್ಲ. ನಾವು ಕೇವಲ ವರಮಾನ ಎನ್ನುವ ಅಸಮಾನತೆಯಏಕ ಮಾಪನವನ್ನು ಪರಿಗಣಿಸಿದರೆ, ಭಾರತ ಅಂತಹ ಕೆಟ್ಟ ಸ್ಥಿತಿಯಲ್ಲಿಲ್ಲ. ಆದರೆ ಉಳಿದ ಎರಡು ಮಾನದಂಡಗಳಾದ ಪ್ರತಿ ವ್ಯಕ್ತಿಯ ವರಮಾನ ( ಖರೀದಿಸುವ ಶಕ್ತಿಯ ಸಮಾನತೆಯಲ್ಲಿ ಮಾಪಿಸಿದರೆ) (ಸ್ಥಳೀಯ ಖರೀದಿ ಶಕ್ತಿಯ ನಿಜವಾದ ಪ್ರತಿಫಲನಕ್ಕೆ) ಹಾಗು ಅವಕಾಶಗಳ ಅಸಮಾನತೆಯ ಮಾಪನವಾದ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಪರಿಗಣಿಸಿ; ಈ ಎರಡೂ ಅಂಶಗಳಲ್ಲಿ ಭಾರತ ತಳಭಾಗದಲ್ಲಿದೆ. ಆದ್ದರಿಂದ, ಭಾರತದ ಜನಸಂಖ್ಯೆಯಲ್ಲಿ ಸ್ವಲ್ಪ ಪ್ರಕ್ಷುಬ್ಧತೆ ಕಾಣಿಸಿಕೊಂಡರೆ ಆಶ್ಚರ್ಯವೇನಿಲ್ಲ. ಭಾರತ, ಹೆಚ್ಚಿನ ಸಮಸ್ಯೆಗಳನ್ನು ಎದುರಿಸಬೇಕಿದೆ

- ಎ. ಪ್ರತಿ ವ್ಯಕ್ತಿ ವರಮಾನ ಕಡಿಮೆ
- ಬಿ. ಉತ್ತಮ ಅವಕಾಶಗಳನ್ನು ಕಲ್ಪಿಸುವ ತನ್ನ ಮಾನವ ಸಂಪನ್ಮೂಲವನ್ನು –ಶಿಕ್ಷಣ, ಆರೋಗ್ಯ ಅಭಿವೃದ್ಧಿ ಪಡಿಸುವಲ್ಲಿ ಕ್ಷೀಣತೆ.
- ಸಿ. ಅಸಮತೋಲನ ಲಾಭಗಳನ್ನು ಸೃಷ್ಟಿಸುವ (ವರಮಾನ ಅಸಮಾನತೆ) ಪರಿಸರ
- ಡಿ. ಭಾರತದಲ್ಲಿ ತರುಣರ ಜನಸಂಖ್ಯೆ ಹೆಚ್ಚು. 25 ವಯಸ್ಸಿನೊಳಗಿನ ತರುಣರ ಜನಸಂಖ್ಯೆ, ಒಟ್ಟಾರೆ ಜನಸಂಖ್ಯೆಯ 52.3% ಇದೆ.[4] 2025ರಲ್ಲಿ ಸಹ ನಾವು ತರುಣರಿಂದ ಕೂಡಿದ ದೇಶವಾಗಿ ಉಳಿದುಕೊಂಡಿರುತ್ತೇವೆ. 2025 ರ ವೇಳೆಗೆ ಭಾರತದ ಜನಸಂಖ್ಯೆಯಲ್ಲಿ 41.8%[1] ನಷ್ಟು ಜನ 25 ರ ಹರೆಯದೊಳಗಿರುತ್ತಾರೆ.

ಈ ಸಮಸ್ಯೆಗಳ ಗಂಟನ್ನು ನಾವು ಹೇಗೆ ಬಿಡಿಸುತ್ತೇವೆ ಎನ್ನುವುದರ ಬಗ್ಗೆ ಭಾರತ ಚಿಂತಿಸಬೇಕಿದೆ. ವರಮಾನವನ್ನು ಹೆಚ್ಚಿಸುತ್ತ, ಜನರು ಆರ್ಥಿಕತೆಯ ಏಣಿಯ ಮೆಟ್ಟಿಲು ಹತ್ತಿಹೋಗಲು ಜನರಿಗೆ ಅವಕಾಶಗಳನ್ನು ಸೃಷ್ಟಿಸಿ,–ಅಂದರೆ ವರಮಾನ ಚಾಲನೆ–ನೀಡುತ್ತ ಕಡುಬಡತನದ ಸ್ಥಿತಿಯನ್ನು ನಿವಾರಿಸಿ ಜನರಲ್ಲಿ ಆಶಾಕಿರಣ ಮೂಡಿಸಬೇಕೆ? ಅಥವಾ ವರಮಾನ ಅಸಮಾನತೆ ಕಡಿಮೆ ಮಾಡಲು ಒಂದು ಸಾರ್ವಜನಿಕ ನೀತಿ ರೂಪಿಸುವುದರ ಬಗ್ಗೆ ಗಮನ ಕೇಂದ್ರೀಕರಿಸಬೇಕೆ? ನನ್ನ ಪ್ರಕಾರ, ವ್ಯಾಪಾರದ ಮೊದಲನೆ ನಿಯಮ, ಬಡತನ (ವರಮಾನ ಮಟ್ಟ), ಅವಕಾಶದ ಕೊರತೆ (ವರಮಾನ ಸಂಚಲನೆ) ಹಾಗು ವರಮಾನ ಅಸಮಾನತೆಗಳ ನಡುವೆ ವ್ಯತ್ಯಾಸವನ್ನು ಸ್ಪಷ್ಟ

ಮಾಡಿಕೊಳ್ಳಬೇಕು. ಭಾರತದಲ್ಲಿ ಸಾರ್ವಜನಿಕ ಚರ್ಚೆಯಿಂದ ಈ ವ್ಯತ್ಯಾಸಗಳು ತಿಳಿಯುವುದಿಲ್ಲ. ಇದರ ಪರಿಣಾಮಾವಾಗಿ, ನಾವು ಪರಿಹಾರ ಹುಡುಕಬೇಕಾದ ಸಮಸ್ಯೆಗಳ ಬಗ್ಗೆ ನಮ್ಮ ಗಮನ ನಿಖರವಾಗಿ ಕೇಂದ್ರೀಕೃತವಾಗಿಲ್ಲ. ನಾವು ಇಲ್ಲಿಯವರೆಗೆ ವರಮಾನ ಸಂಚಲನೆ ಏನು ಮಾಡಿರುವೆವೊ ಅದಕ್ಕಿಂತ ತ್ವರಿತಗತಿಯಲ್ಲಿ ಸಂಚಲನೆ ಆರಂಭಿಸಬೇಕೆನ್ನುವುದಕ್ಕೆ ನನ್ನ ಮತ. ಇದಕ್ಕೆ, ಶಿಕ್ಷಣ ಹಾಗು ಕೌಶಲ ಬೆಳವಣಿಗೆಗೆ ಕಟಿಬದ್ಧರಾಗಬೇಕು. ಇದರರ್ಥ, ಕೇವಲ ಬೆಳವಣಿಗೆ (10%+) ಮಾತ್ರವಲ್ಲ, ಉದ್ಯೋಗಗಳನ್ನೂ ತ್ವರಿತ ಗತಿಯಲ್ಲಿ ಸೃಷ್ಟಿಸಬೇಕು (ಭವಿಷ್ಯದಲ್ಲಿ ವರ್ಷಕ್ಕೆ 10 ದಶಲಕ್ಷಕ್ಕಿಂತ ಅಧಿಕ ಉದ್ಯೋಗ ಸೃಷ್ಟಿ)[5]. ವರಮಾನ ಅಸಮಾನತೆಯಿಂದ ಏರ್ಪಡುವ ಸಾಮಾಜಿಕ ಘರ್ಷಣೆಗಳಿಗೆ ವರಮಾನ ಸಂಚಾಲನೆ ಒಂದು ಪರಿಣಾಮಕಾರಿ ಅಸ್ತ್ರವಾಗಬಲ್ಲದು. ಶ್ರೀಮಂತರ ಮೇಲೆ ತೆರಿಗೆ ಹೇರುತ್ತ, ಬಡವರಿಗೆ ರಿಯಾಯಿತಿ ನೀಡುವ ಮೂಲಕ ವರಮಾನ ಅಸಮಾನತೆಯನ್ನು ಕಡಿಮೆ ಮಾಡುವ ಸಾಂಪ್ರದಾಯಿಕ ನೀತಿ ಇದಕ್ಕೆ ಉತ್ತರವಾಗುವುದಿಲ್ಲ. ವರಮಾನ ಅಸಮಾನತೆ ಸೃಷ್ಟಿಸಲು ಎಲ್ಲರನ್ನೂ ಬಡವರನ್ನಾಗಿಯೇ ಉಳಿಸುವ ಎಡಪಂಥೀಯ ಅಥವಾ ಸಾಮಾಜಿಕ ಸಿದ್ಧಾಂತಕ್ಕೆ ಮರಳುವ ಅಗತ್ಯವಿಲ್ಲ. ಅಧಿಕ ವರಮಾನ ಸಂಚಾಲನೆ ಹಾಗು ಕಡಿಮೆ ಪ್ರಮಾಣದ ವರಮಾನ ಅಸಮಾನತೆಯೊಂದಿಗಿನ ತ್ವರಿತ ಆರ್ಥಿಕ ಬೆಳವಣಿಗೆಯ ನೀತಿ ಅಗತ್ಯವಿದೆ.

ಈ ಚರ್ಚೆ ಅನೇಕ ವಿಧಾನಗಳಲ್ಲಿ ಸಾಗುತ್ತದೆ. ಉದಾಹರಣೆಗೆ, ಜಾಗತೀಕರಣ ಬಡವರಿಗೆ ಒಳ್ಳೆಯದೇ ಅಥವಾ ಕೆಟ್ಟದ್ದೇ ಎಂದು ನನ್ನನ್ನು ಪದೇ ಪದೇ ಕೇಳುತ್ತಾರೆ. ಪ್ರಶ್ನೆಯೇ ತಪ್ಪು ಎಂದು ನಾನು ಹೇಳುತ್ತೇನೆ. ನಾವು ಕೇಳಬೇಕಾಗಿರುವ ಪ್ರಶ್ನೆ–ಜಾಗತೀಕರಣ ಎಲ್ಲರಿಗೂ ಕೆಲಸ ಮಾಡುವಂತೆ ಮಾಡುವುದು ಹೇಗೆ? ನಮಗೆ ಸರಿಯಾದ ಉತ್ತರ ಬೇಕಾದರೆ, ಸರಿಯಾದ ಪ್ರಶ್ನೆ ಕೇಳುವುದು ಬಹಳ ಮುಖ್ಯವಾಗುತ್ತದೆ. ಜಾಗತೀಕರಣ ಎನ್ನುವುದು ಗುರುತ್ವಾಕರ್ಷಣೆ ಇದ್ದಂತೆ. ಗುರುತ್ವಾಕರ್ಷಣೆ ಅಲ್ಲಗಳೆಯಲು ಸಾಧ್ಯವಿಲ್ಲ. ನಾವು ಗುರುತ್ವಾಕರ್ಷಣೆಯನ್ನು ಮೆಟ್ಟಿ ವಿಮಾನ ನಿರ್ಮಿಸಬೇಕು. ಒಳಪಡುವ ಅಭಿವೃದ್ಧಿ ಎಂದರೆ ರಿಯಾಯಿತಿ ನೀಡುವುದಲ್ಲ. ಅದು, ಸ್ವೈರಣೀಯ ಅವಕಾಶಗಳನ್ನು ಸೃಷ್ಟಿಸುವುದರಿಂದ ಬರುವಂಥದ್ದು. ಭಾರತ ಹಾಗು ಚೀನಾಗಳೆರಡೂ ತ್ವರಿತ ಆರ್ಥಿಕ ಬೆಳವಣಿಗೆ ಕಾಣುತ್ತಿವೆ. ಒಳಪಡುವ ಬೆಳವಣಿಗೆ (ಭಾರತ) ಹಾಗು ಒಂದು ಸುಬಾಂಧವ್ಯ ಸಮಾಜ (ಚೀನಾ) ನಿರ್ಮಾಣಕ್ಕೆ ಪರಿಹಾರಗಳನ್ನು ಹುಡುಕಲು ಎರಡೂ ರಾಷ್ಟ್ರಗಳು ಕಸರತ್ತು ಮಾಡುತ್ತಿವೆ. ಈ ಕ್ಷೇತ್ರದಲ್ಲಿ ಭಾರತ ವಿನೂತನವಾದದ್ದನ್ನು ಹುಡುಕಿ ತೆಗೆಯಬೇಕು.

*2. ವರಮಾನ ಮಟ್ಟಗಳಿಂದ ಜೀವನಶೈಲಿಗೆ ಸ್ಥಳಾಂತರ : ಆಕಾಂಕ್ಷೆಗಳ ಸಾರ್ವತ್ರಿಕತೆ:*

ಅಭಿವೃದ್ಧಿ ಸಾಹಿತ್ಯ ಹಾಗು ಆಲೋಚನೆ ವಿಷಯಗಳಲ್ಲಿ ಪ್ರತಿ ವ್ಯಕ್ತಿಯ ವರಮಾನದ ಚರ್ಚೆ ಮೇಲುಗೈ ಸಾಧಿಸುತ್ತಿರುವ ಸನ್ನಿವೇಶದಲ್ಲಿ, ಜನ ಹೇಗೆ ಬದುಕುತ್ತಿದ್ದಾರೆ ಮತ್ತು ಅವರ ನಿರೀಕ್ಷೆಗಳೇನು ಎನ್ನುವುದರ ಮೇಲೆ ಈ ಚರ್ಚೆಗಳು ಬೆಳಕು ಚೆಲ್ಲುತ್ತಿಲ್ಲ. ಜನರ ಬಡತನ–ಆಕಾಂಕ್ಷೆಯ ಮಾನವೀಯ ದೃಷ್ಟಿಕೋನ ಹಿಂದಕ್ಕೆ ಸರಿದಿದೆ. ಉದಾಹರಣೆಗೆ, ದಿನಕ್ಕೆ 2 ಡಾಲರ್‌ನಲ್ಲಿ ಜೀವನ ನಡೆಸುವುದನ್ನು ತೆಗೆದುಕೊಳ್ಳಿ. ಯಾವ ವ್ಯಕ್ತಿಯೂ ತನ್ನಿಂದ ತಾನು ಬದುಕುವುದಿಲ್ಲ. ಜನರು ಕುಟುಂಬಗಳಲ್ಲಿ ಬದುಕುತ್ತಾರೆ, ಐದು ಜನರ ಒಂದು ಕುಟುಂಬವನ್ನು ತೆಗೆದುಕೊಂಡರೆ, ದಿನಕ್ಕೆ 2 ಡಾಲರ್ ಆದಾಯವು, ದಿನಕ್ಕೆ 10 ಡಾಲರ್ ಆಗುತ್ತದೆ ಮತ್ತು ಒಂದು ವರ್ಷಕ್ಕೆ ಆ ಒಂದು ಕುಟುಂಬದ ವರಮಾನ 3,650 ಡಾಲರ್ ಆಗುತ್ತದೆ. ಅಂದರೆ ವರ್ಷಕ್ಕೆ ಆ ಕುಟುಂಬದ ವರಮಾನ ರೂ. 146,000. ಭಾರತದಲ್ಲಿನ ಗ್ರಾಹಕ ನಿರ್ದೇಶಿತ ಬೆಳವಣಿಗೆಗೆ ಈಗ ದಿನಕ್ಕೆ 2 ಡಾಲರ್ ಜನರು ಗಣನೀಯ ಕೊಡುಗೆ ನೀಡುತ್ತಾರೆ ಎನ್ನುವುದನ್ನು ನಾವು ಗುರುತಿಸಬೇಕು. ದ್ವಿಚಕ್ರಗಳ ಹೆಚ್ಚಳ, ಸೆಲ್ ಫೋನ್‌ಗಳ ಏರಿಕೆ, ವೈಯಕ್ತಿಕ ಆರೈಕೆ ಉತ್ಪನ್ನಗಳು, ಜವಳಿ, ಖಾಸಗಿ ಕ್ಷೇತ್ರ ಆರೋಗ್ಯ ಆರೈಕೆ ಹಾಗು ಶಿಕ್ಷಣ ಕ್ಷೇತ್ರಗಳ ಬೆಳವಣಿಗೆಗೆ ಈ ಕುಟುಂಬಗಳು ಕಾರಣ. ವರಮಾನ ಸಂಚಾಲನೆ ಹಾಗು ಅಸಮಾನತೆ ಮಾಪಿಸಲು ಒಂದು ಸೂಕ್ತ ಛಂದಶಾಸ್ತ್ರ ಕಂಡುಹಿಡಿಯುವ ಬಗ್ಗೆ ನಾವು ಗಮನ ಕೇಂದ್ರೀಕರಿಸಬೇಕಿದೆ. ಅದು ವರಮಾನವೇ ಅಥವಾ ಜೀವನಶೈಲಿಯೇ? ಉದಾಹರಣೆಗೆ, ಮುಂಬೈನ ಧಾರಾವಿ ಕೊಳಗೇರಿಯಲ್ಲಿ ನಾವು ನಡೆದಾಡಿದರೆ, ಗುಡಿಸಿಲಿನಲ್ಲಿ ವಾಸಿಸುವ ಜನರ ಬಳಿ ಬಣ್ಣದ ಟಿವಿ ಇರುವುದನ್ನು ನೋಡಬಹುದು. ಪ್ರಾಯಶಃ ಅವರ ಗುಡಿಸಲಲ್ಲಿ ಕುಕ್ಕರ್, ಸೆಲ್ ಫೋನ್, ಎಲೆಕ್ಟ್ರಿಕ್ ಐರನ್ (ಇಸ್ತ್ರಿ ಪೆಟ್ಟಿಗೆ), ಫ್ಯಾನ್ ಮತ್ತು ರೆಫ್ರಿಜಿರೇಟರ್ ಸಹ ಕಾಣಬಹುದು. ಮೇಲ್ಮೈನಲ್ಲಿ ಕಾಣಿಸುವುದಕ್ಕಿಂತ ಭಿನ್ನವಾದ ಜೀವನಶೈಲಿ ಅವರದ್ದಾಗಿರಬಹುದು. ಆ ಕೊಳಗೇರಿ ನಿವಾಸಿಗಳ ಜೀವನಶೈಲಿ ಆಧುನಿಕ ಒಳಚರಂಡಿ ವ್ಯವಸ್ಥೆಯಿಲ್ಲದ, ಕುಡಿಯುವ ನೀರಿನ ವ್ಯವಸ್ಥೆಯಿಲ್ಲದ ಅಥವಾ ಶೌಚಾಲಯಗಳಿಲ್ಲದ ಜೀವನವಾಗಿರಬಹುದು. ಹಾಗಾದರೆ ಜೀವನಶೈಲಿಯ ಮಾಪನವೇನು ಮತ್ತು ನಾವು ಅದರ ಬಗ್ಗೆ ಏಕೆ ಗಮನಕೇಂದ್ರೀಕರಿಸಬೇಕು? ಮುಂದಿನ 20 ವರ್ಷಗಳಲ್ಲಿ ಭಾರತದ 30 ರಿಂದ 35% ಜನಸಂಖ್ಯೆ

ಕೊಳಗೇರಿಗಳಲ್ಲಿಯೇ ವಾಸಿಸುತ್ತಿರುತ್ತಾರೆ. ಅವುಗಳನ್ನು ನಾವು ಜನನಿಬಿಡ ಜನಸಂಖ್ಯಾ ಸಮೂಹಗಳೆಂದು ಕರೆಯಬಹುದು. ತ್ವರಿತ ನಗರೀಕರಣ, ಎರಡು ಹಾಗು ಮೂರನೇ ಹಂತದ ನಗರಗಳೂ ಸಹ, ಇವುಗಳ ಪರಿಣಾಮಗಳ ಬಗ್ಗೆ ನಾವು ಮನನ ನಡೆಸಬೇಕು. ಈ ಅಭಿವೃದ್ಧಿಗಳು ಸಮಾಜದ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಅವಕಾಶಗಳನ್ನು ಸೃಷ್ಟಿಸುತ್ತವೆಯೇ ಅಥವಾ ಸಮಸ್ಯೆಗಳು ಉಲ್ಬಣಗೊಳ್ಳುವಂತೆ ಮಾಡುತ್ತವೆಯೇ?

ಜನರು ನಗರಗಳಿಗೆ ಬಂದಾಗ, ಅದು ಸಣ್ಣ ನಗರವಾಗಿರಲಿ ದೊಡ್ಡ ನಗರವಾಗಿರಲಿ, ಅವರ ಆಕಾಂಕ್ಷೆಗಳು ನಾಟಕೀಯ ರೀತಿಯಲ್ಲಿ ಬದಲಾಗುತ್ತವೆ. ಅವರು ಶ್ರೀಮಂತರನ್ನು ಆಳತೆಗೋಳಾಗಿ ಸ್ವೀಕರಿಸುತ್ತಾರೆ. ಬಿಲ್ ಬೋರ್ಡ್, ಟೆಲಿವಿಷನ್ ಮತ್ತು ಇತರ ಮಾಧ್ಯಮಗಳ ಮೇಲೆ ಹೆಚ್ಚಿನ ಜೀವನಶೈಲಿ ಮಾಹಿತಿಯನ್ನು ವ್ಯಕ್ತಪಡಿಸುತ್ತಾರೆ. ಅವರ ಆಕಾಂಕ್ಷೆ ಹೆಚ್ಚಿದಷ್ಟು ವೇಗವಾಗಿ ಅವರ ವರಮಾನ ಹೆಚ್ಚಲಾರದು. ಆದ್ದರಿಂದ, ಏರುವ ಆಕಾಂಕ್ಷೆ ಹಾಗು ಆ ಆಕಾಂಕ್ಷೆಗಳನ್ನು ಪೂರೈಸಬಲ್ಲ ವರಮಾನದ ನಡುವಿನ ಅಂತರ, ಸಾಮಾಜಿಕ ಅಶಾಂತಿ ಸೃಷ್ಟಿಸಬಲ್ಲದು. ಆದ್ದರಿಂದ, ಸಾಮಾಜಿಕ ಘರ್ಷಣೆಗಳಿಗೆ ಮೂಲವಾದ ಜೀವನಶೈಲಿ, ಅಸಮಾನತೆ ಬಗ್ಗೆ ಗಮನಕೇಂದ್ರೀಕರಿಸಬೇಕೆಂದು ನಾನು ಸೂಚಿಸುತ್ತೇನೆ. ನಾವು ಸಮಸ್ಯೆಯನ್ನು ಕೇವಲ ವರಮಾನ ಅಸಮಾನತೆ ಎಂದು ಪರಿಗಣಿಸದೆ, ಜೀವನಶೈಲಿ ಅಸಮಾನತೆ ಎಂದು ನೋಡಿದರೆ, ಆಗ ಬಹುಶಃ ಸಮಸ್ಯೆಗೆ ಒಂದು ಪರಿಹಾರ ಸಿಗಬಹುದು.

*3. ಬೆಲೆ–* ಕಾರ್ಯಕ್ಷಮತೆಯ *ಬದಲಾವಣೆ*

ಕಡಿಮೆ ವರಮಾನ, ಉನ್ನತ ಆಕಾಂಕ್ಷೆಗಳು ಹಾಗು ವರಮಾನ ಅಸಮಾನತೆಗಳ ಸಮಸ್ಯೆಗಳ ಕ್ರೋಢೀಕರಣ, ಒಂದು ಕ್ಷಣ ನಮ್ಮನ್ನು ಹತಾಶರನ್ನಾಗಿಸಬಹುದು. ಈ ಎಲ್ಲಾ ಸಮಸ್ಯೆಗಳೊಂದಿಗೆ ನಾವು ಏಕಕಾಲದಲ್ಲಿ ಹೆಣಗುವುದಾದರೂ ಹೇಗೆ? ಇದು ಸಾಧ್ಯ ಎಂಬುದು ನನ್ನ ನಂಬಿಕೆ. ಎಲ್ಲಾ ಉತ್ಪನ್ನಗಳ ಹಾಗು ಸೇವೆಗಳ ಬೆಲೆ–ಕಾರ್ಯಕ್ಷಮತೆ ಮಟ್ಟಗಳಲ್ಲಿ ನಾವು ಮೂಲಭೂತ ಬದಲಾವಣೆ ಮಾಡುವುದರ ಬಗ್ಗೆ ಚಿಂತಿಸಬೇಕು. ಸಂಘಟಿತ ಕ್ಷೇತ್ರವಾದ ಖಾಸಗಿ ಹಾಗು ಸಾರ್ವಜನಿಕ ಉದ್ದಿಮೆಗಳು ಪ್ರಾಥಮಿಕವಾಗಿ ಉತ್ಪನ್ನಗಳನ್ನು ಹಾಗು ಸೇವೆಗಳನ್ನು ಶ್ರೀಮಂತ ಹಾಗು ಹಣವಂತರ ವರ್ಗಕ್ಕೆಂದು ಅಭಿವೃದ್ಧಿಪಡಿಸಿದವು. ಬಡವರು ಈ ಸಂಘಟಿತ ಕ್ಷೇತ್ರದ ತಳಭಾಗದಲ್ಲಿದ್ದರು. ಆದ್ದರಿಂದ, ನಾವು ಉತ್ಪನ್ನಗಳ ಹಾಗು ಸೇವೆಗಳ ಬೆಲೆ–ಕಾರ್ಯಕ್ಷಮತೆ (ಮೌಲ್ಯ) ಯ ಚಿತ್ರ ಬಿಡಿಸಿದರೆ, ಅದು ಹೀಗಿರುತ್ತದೆ.






ಸಾಂಪ್ರದಾಯಿಕವಾಗಿ, ಬಡವರು, ಮಧ್ಯಮ ವರ್ಗ ಹಾಗು ಶ್ರೀಮಂತ ವರ್ಗವನ್ನು ಸ್ಪಷ್ಟ ವಿಭಾಗಗಳನ್ನಾಗಿ ಕಾಣಲಾಗುತ್ತಿತ್ತು. ವಿವಿಧ ಕಾರ್ಯಕ್ಷಮತೆ ಗುಣಲಕ್ಷಣಗಳೊಂದಿಗೆ ಉತ್ಪನ್ನಗಳನ್ನು ಹಾಗು ಸೇವೆಗಳನ್ನು ಅಭಿವೃದ್ಧಿಪಡಿಸಲಾಯಿತು. ಕಾರ್ಯಕ್ಷಮತೆಯ ಕಾರ್ಯಾತ್ಮಕ, ಭಾವನಾತ್ಮಕ ಹಾಗು ಸೌಂದರ್ಯ ಅಂಶಗಳು ಭಿನ್ನವಾಗಿದ್ದವು. ಕಾರ್ಯಕ್ಷಮತೆಯ ಆಧಾರದ ಮೇಲೆ ಬೆಲೆ ನಿರ್ಧಾರಿತವಾಗಿತ್ತು. ನಿಮ್ಮ ಚರ್ಮಕ್ಕೆ ಆಗದ ಡಿಟರ್ಜೆಂಟ್, ಬಡವರಿಗೆ ಸೂಕ್ತವಾಗಿ ಕಂಡಿತು. ಜೈವಿಕ ಇಂಧನದಲ್ಲಿ ಅಡಿಗೆ ಮಾಡುವುದು ಸ್ವೀಕೃತವಾಯಿತು. ಗ್ರಾಮೀಣ ಬಡವರಿಗೆ ಎಲ್‌ಪಿಜಿ ಯ ಅಗತ್ಯ ಬೀಳಲಿಲ್ಲ. ಬಡವರಿಂದ ಶ್ರೀಮಂತ ವರ್ಗದ ಕಡೆಗೆ ಸರಿದಂತೆ, ಒಂದು ಅಸದೃಶ್ಯವಾದ, ಆದರೆ ಸ್ಪಷ್ಟವಾದ "ಬೆಲೆ–ಕಾರ್ಯಕ್ಷಮತೆ" (ಮೌಲ್ಯ) ಸಂಭಂಧ ಗೋಚರಿಸಿತು. ಬಡವರು ಗ್ರಾಹಕರಾಗಿ ಬದಲಾಗಿರುವ ಸನ್ನಿವೇಶದಲ್ಲಿ, ಚಿತ್ರಣ ನಾಟಕೀಯವಾಗಿ ರೂಪಾಂತರಗೊಂಡಿದೆ. ಕಾರ್ಯಾತ್ಮಕ ಹಾಗು ಭಾವನಾತ್ಮಕ ಗುಣಮಟ್ಟಗಳನ್ನು ತ್ಯಾಜ ಮಾಡದೆ, ಹೊಸ ಗ್ರಾಹಕನ ಖರೀದಿ ಶಕ್ತಿ, ಮೌಲ್ಯದ ಸಮೀಕರಣವನ್ನು ಬದಲಾಯಿಸಿದೆ. 30 ಡಾಲರ್ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, 30 ಡಾಲರ್ ಸೆಲ್ ಫೋನ್, 0.01 ಡಾಲರ್ ಶಾಂಪೂ ಪ್ಯಾಕೆಟ್, 2500 ಡಾಲರ್ ಕಾರ್, 100 ಡಾಲರ್ ಕಂಪ್ಯೂಟರ್, 25 ಡಾಲರ್ ಹೊಟೆಲ್ ಕೋಣೆ–ಇವೆಲ್ಲವೂ ನಾಟಕೀಯವಾಗಿ ಬದಲಾಗುತ್ತಿರುವ ಮೌಲ್ಯದ ಸಮೀಕರಣದ ಚಿತ್ರಣಗಳು. ಈ ಪ್ರಕ್ರಿಯೆ ಮತ್ತಷ್ಟು ತ್ವರಿತಗೊಳ್ಳಲಿದೆ. ಜೀವನಶೈಲಿ ಸಮಾನತೆ ಸೃಷ್ಟಿಸುವಲ್ಲಿ ಹೆಚ್ಚುತ್ತಿರುವ ಸಾಮರ್ಥ್ಯ, ಹೆಚ್ಚುತ್ತಿರುವ ವರಮಾನ ಅಸಮಾನತೆಗೆ ಪ್ರತ್ಯೌಷಧವಾಗಬಲ್ಲದು. ಪ್ರಪಂಚದಾದ್ಯಂತ ಉನ್ನತ ತಂತ್ರಜ್ಞಾನದ ಬದಲಾವಣೆ ಸ್ವರೂಪದ ಮೂಲಕ ಈ ಪ್ರವೃತ್ತಿ ಮತ್ತಷ್ಟು ಹೆಚ್ಚಾಗಲಿದೆ.

*4. ದುರ್ಬಲ ತಂತ್ರಜ್ಞಾನ ಪರಿಹಾರದಿಂದ ಉನ್ನತ ತಂತ್ರಜ್ಞಾನ ಪರಿಹಾರಗಳಿಗೆ ಸಾರ್ವತ್ರಿಕ ಪ್ರವೇಶಾವಕಾಶದತ್ತ:* ಕೆಳಗಿನ ಕೋಷ್ಟಕ 3 ರಲ್ಲಿ ತೋರಿಸಿರುವಂತೆ, ಉನ್ನತ ತಂತ್ರಜ್ಞಾನದ ಘಟಕಾಂಶಗಳಲ್ಲಿ ಕಾರ್ಯಕ್ಷಮತೆ ಸುಧಾರಣೆಯಲ್ಲಿನ ನಾಟಕೀಯ ಬದಲಾವಣೆಗಳನ್ನು ಪರಿಗಣಿಸೋಣ

**ಯಾರೂ ನಿರೀಕ್ಷಿಸದಷ್ಟು ವೇಗವಾಗಿ ಬೆಲೆ–ಕಾರ್ಯಕ್ಷಮತೆಗಳು ಬದಲಾಗುತ್ತಿವೆ**

| | 1970 | 80 | 90 | 2006 |
|---|---|---|---|---|
| 1. ಟ್ರಾನ್ಸಿಸ್ಟರ್/ಚಿಪ್ | $10^3$ | - | $10^6$ | $10^9$ |
| 2. ಸೂಕ್ಷ್ಮ ಉಪಕರಣಗಳ ಗಾತ್ರದ ಕುಗ್ಗುವಿಕೆ | - | $10^{-1}$ | - | $10^{-6}$ |
| 3. ಕಂಪ್ಯೂಟಿಂಗ್ ಶಕ್ತಿ | - | - | $10^{11}$ | $10^{15}$ |
| 4. ಪ್ರತಿ ಎಮ್‌ಐಪಿಯ ವೆಚ್ಚ ($1000) | - | - | 1 | 1M |
| 5. ಡಿಎನ್‌ಎ ಸೀಕ್ವೆನ್ಸಿಂಗ್ ವೆಚ್ಚ ($/BASE PAIR) | - | - | 10 | 0.05 |
| 6. ಅಯಸ್ಕಾಂತೀಯ ಮಾಹಿತಿ ಶೇಖರಣೆ (bits/dollar) | $10^4$ | - | - | $10^{11}$ |

ಮೂಲ : ರೇ ಕರ್ಝ್‌ವೆಲ್

ಉನ್ನತ ತಂತ್ರಜ್ಞಾನದಲ್ಲಿ ಕಾರ್ಯಾತ್ಮಕತೆಯ ಪ್ರತಿ ಯೂನಿಟ್ ವೆಚ್ಚ ಇಷ್ಟು ತ್ವರಿತವಾಗಿ ಬದಲಾಗುತ್ತಿರುವುದನ್ನು ಗಮನಿಸಿದರೆ, ಆಧುನಿಕ ತಂತ್ರ ಅಳವಡಿಸಿದ ಉತ್ಪನ್ನಗಳನ್ನು ಹಾಗು ಸೇವೆಗಳನ್ನು ಬಡವರು ಖರೀದಿಸುವ ಸಾಮರ್ಥ್ಯ ಹೊಂದಿದ್ದಾರೆ ಎನಿಸುತ್ತದೆ–ಅದು ಸೆಲ್ ಫೋನ್ ಆಗಿರಬಹುದು ಅಥವಾ ಐಪಾಡ್ ಆಗಿರಬಹುದು.

ಮುಂದುವರಿದು, ಗೂಗಲ್‌ನ ಸಂದರ್ಭದಲ್ಲಿರುವಂತೆ, ಮಾಹಿತಿಗೆ ಪ್ರವೇಶಾವಕಾಶ ಪಡೆಯುವಂಥ ಅನೇಜ ಹೊಸ ಸಂಪತ್ತಿನ ಮೂಲಗಳು ಉಚಿತವಾಗಿ ದೊರೆಯುತ್ತಿವೆ. ಆದ್ದರಿಂದ, ಭಾರತದಂಥ ಉಗಮಗೊಳ್ಳುತ್ತಿರುವ ಮಾರುಕಟ್ಟೆಗಳಲ್ಲಿ ಬೆಲೆ–ಕಾರ್ಯಕ್ಷಮತೆಯ ಮೇಲಿನ ಒತ್ತಡ ಒಂದು ಜಾಗತಿಕ ವಿದ್ಯಮಾನವನ್ನು ಸೃಷ್ಟಿಸಬಹುದು– ನಾಟಕೀಯ ರೀತಿಯಲ್ಲಿ ಬೆಲೆಗಳು ಕಡಿಮೆಯಾಗಬಹುದು. ವಿವಿಧ ಉದ್ದಿಮೆಗಳ ಉದಾಹರಣೆಗಳನ್ನು ಗಮನಿಸಿದರೆ, ಈ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ ಎನಿಸುತ್ತದೆ. ಇಂತಹ ಪರಿಸ್ಥಿತಿ ಇರುವಾಗ, ಎಲ್ಲರಿಗೂ ಲಭ್ಯವಾಗುವಂಥ ಆಧುನಿಕ ತಂತ್ರಜ್ಞಾನ ಪರಿಹಾರಗಳನ್ನು ಭಾರತ ಏಕೆ ಒದಗಿಸಲು ಸಾಧ್ಯವಿಲ್ಲ ಎನ್ನುವುದಕ್ಕೆ ಕಾರಣಗಳೇ ಇಲ್ಲ. ಅಂದರೆ, ಇದು ಒಳ್ಳೆಯ ಸುದ್ದಿ. ಹೆಚ್ಚಿನ ಜನರು ವಸ್ತುಗಳನ್ನು ಖರೀದಿಸಬಹುದು. ಹೆಚ್ಚು ಹೆಚ್ಚು ಜನರು ತಮ್ಮ ಜೀವನಶೈಲಿಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ರೀತಿ ಖರೀದಿಸುವ ಶಕ್ತಿಯ ಏರಿಕೆಯ ಪರಿಣಾಮವಾಗಿ , ಬಳಕೆಯ ವಿಷಯದಲ್ಲಿ ಬೃಹತ್ ಸ್ಫೋಟ ಏರ್ಪಡಲಿದೆ. ಈ ಬೃಹತ್ತ್ ಮಾರುಕಟ್ಟೆ ಅವಕಾಶದಿಂದ ಪರಿಸರದ ಮೇಲೆ ಹಾಗು ಬೇಡಿಕೆಯ ಕಾರಣದಿಂದ ಗಣನೀಯ ಪ್ರಭಾವ ಉಂಟಾಗುತ್ತದೆ.

*5. ಪಾರಿಸರಿಕ ಚಟುವಟಿಕೆಗೆ ಉತ್ಪನ್ನಗಳನ್ನು ಹಾಗು ಉದ್ಯೋಗಗಳನ್ನು ಸೃಷ್ಟಿಸುವುದು:*
೮೦೦ ದಶಲಕ್ಷ ಭಾರತೀಯರು ಸೂಕ್ಷ್ಮ ಗ್ರಾಹಕರು ಹಾಗು ಸೂಕ್ಷ್ಮ ಉತ್ಪಾದಕರಾದರೆ ಏನಾಗುತ್ತದೆ? ಪಾರಿಸರಿಕ ಪ್ರಭಾವಗಳು ಗಣನೀಯವಾಗಿರಬಹುದು. ಯಾವುದೇ ಇರಲಿ–ನೀರು, ವಿದ್ಯುತ್, ತ್ಯಾಜ್ಯ ಮತ್ತು ಪ್ಯಾಕೇಜಿಂಗ್, ಭೂ ಬಳಕೆ–ಈ ಎಲ್ಲಾ ಪಾರಿಸರಿಕ ಘಟಕಾಂಶಗಳ ಮೇಲೆ ಒತ್ತಡ ಬೀಳುತ್ತದೆ. ಸ್ಥಿರಣೆಯತೆ ಎನ್ನುವುದು ಬಹುಸ್ವರೂಪದ್ದು. ಅದು ಕೇವಲ ವಿದ್ಯುತ್ ಅಥವಾ ಜಲ ಮಾತ್ರವಲ್ಲ. ಅಥವಾ ಕೇವಲ ತ್ಯಾಜ್ಯವಲ್ಲ. ದುರಾದೃಷ್ಟವಶಾತ್, ಪಾರಿಸರಿಕ ಒತ್ತಡಗಳು ಮೊದಲು ಬಡವರ ಮೇಲೆ ಪ್ರಭಾವ ಬೀರುತ್ತವೆ. ಅಂದರೆ, ಟ್ರಕ್‌ಗಳಲ್ಲಿ ನೀರು ಸರಬರಾಜು ಅಥವಾ ಅಡಿಗೆಗೆ ಜೈವಿಕ ಇಂಧನದ ಬಳಕೆಯಿಂದ ಉಸಿರಾಟದ ತೊಂದರೆ ಅಥವಾ ಅಸುರಕ್ಷಿತ ಕುಡಿಯುವ ನೀರಿನ ಪೂರೈಕೆಯಿಂದ ಉದರ ಸಂಬಂಧಿತ ಸಮಸ್ಯೆಗಳು.

ತ್ವರಿತ ಬೆಳವಣಿಗೆಯ ಪ್ರಭಾವಗಳಾದ ಬಳಕೆ ಮತ್ತು ಉತ್ಪಾದನೆಯ ಪ್ರಭಾವ ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗದೆ ಇಡೀ ಪ್ರಪಂಚದಾದ್ಯಂತ ಉಂಟಾಗುತ್ತದೆ. ಇದನ್ನು ಅರ್ಥಮಾಡಿಕೊಳ್ಳುವುದು ಸ್ವಲ್ಪ ಕಷ್ಟಕರ. ಪಾರಿಸಾರಿಕ ಹಾನಿಗೆ ಭೌಗೋಳಿಕ ಸೀಮೆಗಳಿಲ್ಲ. ಪರಿಸರ ವ್ಯವಸ್ಥೆಗಳ ಪಾತ್ರವನ್ನು ನಾವು ಎರಡು ಬಗೆಯಲ್ಲಿ ನೋಡಬಹುದು–ಆಹಾರ ಮತ್ತು ನೀರಿನ ಒದಗಣೆ. ಅದನ್ನು ಪೂರೈಕೆ ಎನ್ನೋಣ. ಎರಡನೆಯದಾಗಿ, ಈ ನೈಸರ್ಗಿಕ ಬಂಡವಾಳವನ್ನು ಅಥವಾ ಸಂಪನ್ಮೂಲಗಳನ್ನು ನಾವು ಹೇಗೆ ನಿಯಂತ್ರಿಸುತ್ತೇವೆ ಮತ್ತು ಸಂರಕ್ಷಿಸುತ್ತೇವೆ? ಉದಾಹರಣೆಗೆ, ಪ್ರವಾಹದಂಥ ನೈಸರ್ಗಿಕ ವಿಕೋಪದ ವಿರುದ್ಧ ನಾವು ಹೇಗೆ ರಕ್ಷಿಸಿಕೊಳ್ಳುತ್ತೇವೆ? ಬಹುಶಃ, ಮುಂಬೈನಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸುಧಾರಿಸಬಹುದು ಮತ್ತು ತನ್ಮೂಲಕ ಮಳೆಗಾಲದಲ್ಲಿ ಭಾರಿ ಪ್ರವಾಹದ ಪರಿಸ್ಥಿತಿಯನ್ನು ನಿಭಾಯಿಸುವಂತೆ ಮಾಡಬಹುದು. ಮಲೇರಿಯಾದಂಥ ಕಾಯಿಲೆ ಹರಡುವುದನ್ನು ನಿಯಂತ್ರಿಸಬಹುದು. ಅರಣ್ಯಗಳು ನಾಶವಾಗುವುದನ್ನು ತಡೆಗಟ್ಟಬಹುದು. ಅಂತಿಮವಾಗಿ, ಪ್ರಕೃತಿಯ ಕೊಡುಗೆಗಳನ್ನು– ಸುಂದರ ಸರೋವರಗಳು, ಹಿಮಚ್ಛಾದಿತ ಪರ್ವತ ಶಿಖರಗಳು ಮತ್ತು ಸಮುದ್ರ– ಇವುಗಳನ್ನು ನೋಡಿ ಆನಂದಿಸಬಹುದು. ಪ್ರಕೃತಿ ಜೀವನದ ಗುಣಮಟ್ಟವನ್ನು ಹೆಚ್ಚಿಸಬಲ್ಲದು. ಪ್ರಪಂಚದಾದ್ಯಂತ, ಮಾನವನ ಬುದ್ಧಿಶಕ್ತಿ ಪ್ರಕೃತಿ ನೀಡುವ ಹೇರಳ ಸಂಪತ್ತನ್ನು ಸುಧಾರಿಸಲು ಮಾರ್ಗಗಳನ್ನು ಹುಡುಕುತ್ತ ಬಂದಿದೆ. ಪ್ರತಿ ಎಕರೆಗೆ ಹೆಚ್ಚು ಇಳುವರಿ ಬರುವಂತೆ ಮಾಡಿದ್ದೇವೆ. ಒಂದು ರೀತಿಯಲ್ಲಿ ಆಹಾರ ಪೂರೈಕೆ ಹೆಚ್ಚಿಸಿದ್ದೇವೆ. ಆದರೆ, ನೈಸರ್ಗಿಕ ಬಂಡವಾಳದ ನಿಯಂತ್ರಣ, ಒಂದು ಮಿಶ್ರ ಚಿತ್ರಣವನ್ನು ನೀಡುತ್ತದೆ. ಪ್ರವಾಹಗಳು, ಬರಗಾಲ, ಅರಣ್ಯನಾಶ, ಭೂಮಿ ಹಾಗು ಜಲದ ಗುಣಮಟ್ಟ ಕುಸಿಯುತ್ತದೆ. ಇವುಗಳಿಗೆ ಭಾರತ ಶೀಘ್ರ ಪರಿಹಾರ ಕಂಡುಕೊಳ್ಳಬೇಕಿದೆ. ದುರ್ಬಲ ನಿಯಂತ್ರಣ ಹಾಗು ಕಾನೂನುಗಳನ್ನು ಜಾರಿಗೆ ತರದ ಕಾರಣ, ಭಾರತದ ನೈಸರ್ಗಿಕ ಬಂಡವಾಳಕ್ಕೆ ಏನಾಗುತ್ತಿದೆ ಎಂದು ನಿಮಗೆ ತೋರಿಸಲು ನನ್ನ ಬಳಿ ನಕ್ಷೆಗಳು ಉಪಗ್ರಹಗಳಿಂದ ತೆಗೆದ ಚಿತ್ರಣಗಳಿವೆ. ತಕ್ಷಣ ಗಮನ ಹರಿಸಬೇಕಾದ ಹಲವಾರು ವಿಷಯಗಳ ಪೈಕಿ ನಾನು ನಾಲ್ಕನ್ನು ಮಾತ್ರ ಆರಿಸಿಕೊಳ್ಳುತ್ತೇನೆ :

1) ನೀರಿನ ಗುಣಮಟ್ಟ, ಅದರ ಲಭ್ಯತೆ ಮತ್ತು ಪೂರೈಕೆ, ಕೃಷಿ, ಕೈಗಾರಿಕೆ ಮತ್ತು ಕೌಟುಂಬಿಕ ಬಳಕೆಗೆ ನೀರಿನ ಬಳಕೆಯ ಮಿಶ್ರಣ

2) ವಿದ್ಯುತ್

3) ಅರಣ್ಯಗಳ ನಾಶ

4) ಆರೋಗ್ಯ. ಆರೋಗ್ಯ ಎನ್ನುವುದು ನೀರು ಮತ್ತು ವಿದ್ಯುತ್‌ಗಳೊಂದಿಗೆ ನಿಕಟ ಸಂಬಂಧ ಹೊಂದಿರುವಂಥದ್ದು

ಸ್ಥಿರಣೀಯ ಅಭಿವೃಧಿ ಇಲ್ಲದೆ ಬಡತನ ಹೋಗಲಾಡಿಸುವುದನ್ನು ಯೋಚಿಸುವುದಕ್ಕೂ ಸಾಧ್ಯವಿಲ್ಲ. ಈ ಎರಡರ ನಡುವೆ ಒಂದು ನಿಕಟ ಸಂಬಂಧವಿದೆ. ವಿದ್ಯುತ್, ಜಲ, ಪ್ಯಾಕೇಜಿಂಗ್ ಹಾಗು ಪ್ರತಿ ವ್ಯಕ್ತಿಯಿಂದ ಉತ್ಪಾದನೆಯಾಗುವ ತ್ಯಾಜ್ಯ ಪ್ರಮಾಣಗಳ ಬಗೆಗಿನ ಈಗಿನ ಅಭಿವೃದ್ಧಿ ಮಾದರಿಗಳು ಸರಿಯಾಗಿಲ್ಲ. ಇವುಗಳ ಬಗ್ಗೆ ನಾವು ಹೊಸ ಮಾದರಿಗಳನ್ನು ಅಭಿವೃದ್ಧಿಪಡಿಸಬೇಕಿದೆ. ಭಾರತ, ಪಾರಿಸರಿಕ "ಟೈಮ್ ಬಾಂಬ್" ಪ್ರತಿನಿಧಿಸುತ್ತದೆ. ಭಾರತದ ನಗರಗಳಲ್ಲಿ ನೀರಿನ ಕೊರತೆಯಿಂದಾಗಿ ಈಗಾಗಲೇ ಬೃಹತ್ ಸಮಸ್ಯೆ ಉಂಟಾಗಿದ್ದು, ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಾಧ್ಯತೆಗಳಿವೆ. ವಿದ್ಯುತ್ ದರ ಈಗಾಗಲೇ ಅಧಿಕವಾಗಿದೆ. ಸಂಪನ್ಮೂಲಗಳ ಬಳಕೆಯ ಈ ವಿಧಾನ ಅಸ್ಥಿರಣಿಯವಾಗುತ್ತಿದೆ. ಸಂಪನ್ಮೂಲಗಳನ್ನು ಹೆಚ್ಚು ವಿವೇಚನೆಯಿಂದ ಬಳಸಬೇಕು. ಹಾಗಾಗಿ ಈ ಕ್ಷೇತ್ರದಲ್ಲಿ ವಿನೂತನ ಪರಿಹಾರ ಹುಡುಕುವ ಅಗತ್ಯವಿದೆ; ಅಡಿಗೆ ಮಾಡಲು ಉತ್ತಮ ವ್ಯವಸ್ಥೆ, ಕೈಗಾರಿಕೆ, ಕೃಷಿ ಹಾಗು ಕೌಟುಂಬಿಕ ಉದ್ದೇಶಗಳಿಗೆ ನೀರು ಹಂಚಿಕೆ ಮತ್ತು ಸೂಕ್ತ ದರ ವಿಧಿಸುವಿಕೆ, ತ್ಯಾಜ್ಯ ಪ್ರಮಾಣ ಕಡಿಮೆ ಮಾಡುವ ವಿಧಾನ–ಇವೆಲ್ಲಕ್ಕೂ ಉತ್ತರ ಹುಡುಕಬೇಕಿದೆ. ಒಂದು ನ್ಯಾಯಯುತ ಹಾಗು ಎಲ್ಲರನ್ನೂ ಒಳಗೊಂಡ ಸಮಾಜವನ್ನು ಸೃಷ್ಟಿಸುವುದಕ್ಕೆ ಕೈಗೆಟುಕುವ ದರಗಳಲ್ಲಿ ಉತ್ತಮ ಕಾರ್ಯಕ್ಷಮತೆ ಮಟ್ಟ ರೂಪಿಸಲು ಪಾರಿಸರಿಕವಾಗಿ ಬೆಲೆ ತೆತ್ತಬೇಕಾಗುತ್ತದೆ. ಇಂತಹ, ತಡೆರಹಿತ ಎಲ್ಲರನ್ನೂ ಒಳಗೊಂಡ ಬೆಳವಣಿಗೆಯೊಂದಿಗಿನ ಪಾರಿಸರಿಕ ಸೂಕ್ಷ್ಮತೆಯ ವಾತಾವರಣವನ್ನು ಸೃಷ್ಟಿಸಲು ಯಾವ ಷರತ್ತುಗಳು ಅನ್ವಯವಾಗುತ್ತವೆ?

*6. ಆಡಳಿತದ ಬಗ್ಗೆ ಗಮನ ಕೇಂದ್ರೀಕರಿಸುವುದು:*

ಖರೀದಿ ಶಕ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ವ್ಯಕ್ತಿಯ ವರಮಾನವನ್ನು ಪರಿಗಣಿಸೋಣ. ಇದು ದೇಶದ ಮಾನವ ಅಭಿವೃದ್ಧಿ ಸೂಚ್ಯಂಕದ ಒಂದು ಪ್ರತಿಫಲನ ಹಾಗು ಆಡಳಿತದ ಗುಣಮಟ್ಟವನ್ನು ಸೂಚಿಸುತ್ತದೆ– ಅಂದರೆ ಭ್ರಷ್ಟಾಚಾರದ ಮಟ್ಟವನ್ನು ಸೂಚಿಸುತ್ತದೆ. ಈ ಮಾಹಿತಿ ಎಲ್ಲಾ ದೇಶಗಳಲ್ಲಿ ಸಾರ್ವಜನಿಕವಾಗಿ ಲಭ್ಯವಿದೆ. ಉದಾಹರಣೆಗೆ;

ಎ. ಖರೀದಿಸುವ ಶಕ್ತಿಗೆ ಸಂಬಂಧಿಸಿದಂತೆ ಪ್ರತಿ ವ್ಯಕ್ತಿಯ ರಾಷ್ಟ್ರೀಯ ಮಟ್ಟದ ವರಮಾನ ಮಾಹಿತಿ ವಿಶ್ವ ಬ್ಯಾಂಕ್‌ನಿಂದ ಲಭ್ಯವಾಗುತ್ತದೆ.

ಬಿ. ಮಾನವ ಅಭಿವೃದ್ಧಿ ಸೂಚ್ಯಂಕ ಯುಎನ್‌ಡಿಪಿ ಯಿಂದ ಲಭ್ಯ

ಸಿ. ಭ್ರಷ್ಟಾಚಾರ ಸೂಚ್ಯಂಕ ಅಂತರರಾಷ್ಟ್ರೀಯ ಪಾರದರ್ಶಕ ಸಂಸ್ಥೆಯಿಂದ ಲಭ್ಯ.

ನಾವು ಈ ಮಾಹಿತಿಯನ್ನು ಬಳಸಿ, ಬಡ ಹಾಗು ಶ್ರೀಮಂತ ರಾಷ್ಟ್ರಗಳನ್ನು ಅವಲೋಕಿಸಿದರೆ ಬಹಳ ಕುತೂಹಲಕಾರಿ ಸಂಗತಿಗಳು ಹೊರ ಹೊಮ್ಮುತ್ತವೆ.

ಎ. ಮಾನವ ಅಭಿವೃದ್ಧಿ ಸೂಚ್ಯಂಕ ಹಾಗು ಭ್ರಷ್ಟಾಚಾರ ಸೂಚ್ಯಂಕಗಳನ್ನು ವಿಶ್ಲೇಷಿಸಿದರೆ, ಭ್ರಷ್ಟ ದೇಶಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುತ್ತದೆ

ಬಿ. ಭ್ರಷ್ಟಾಚಾರ ಸೂಚ್ಯಂಕ ಮತ್ತು ಖರೀದಿ ಶಕ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ವ್ಯಕ್ತಿಯ ವರಮಾನವನ್ನು ಗಮನಿಸಿದರೆ, ಭ್ರಷ್ಟ ದೇಶಗಳು ಶ್ರೀಮಂತವಾಗಿಲ್ಲ. ಭ್ರಷ್ಟದೇಶಗಳಲ್ಲಿ ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ಶ್ರೀಮಂತರಿರಬಹುದು, ಆದರೆ ಒಟ್ಟಾರೆಯಾಗಿ ದೇಶವನ್ನು ಪರಿಗಣಿಸಿದರೆ, ಅದು ಬಡ ದೇಶವೇ.

ಸಿ. ಮಾನವ ಅಭಿವೃದ್ಧಿ ಸೂಚ್ಯಂಕ ಹಾಗು ಖರೀದಿ ಶಕ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ವ್ಯಕ್ತಿಯ ವರಮಾನವನ್ನು ಗಮನಿಸಿದರೆ, ಮೇಲಿನ ವಿನ್ಯಾಸವೇ ಕಾಣುತ್ತದೆ. ಯಾವ ದೇಶ ಮಾನವ ಸಂಪನ್ಮೂಲದಲ್ಲಿ ಹೆಚ್ಚು ಬಂಡವಾಳ ಹೂಡುತ್ತದೋ, ಆ ದೇಶ ಅಷ್ಟು ಶ್ರೀಮಂತವಾಗುತ್ತದೆ.

ಈ ಸಂಬಂಧಗಳನ್ನು ಕೆಳಗೆ ತೋರಿಸಲಾಗಿದೆ. ಇವುಗಳಿಂದ ನಾವು ಕೆಲವು ಮುಖ್ಯ ನಿರ್ಣಯಗಳಿಗೆ ಬರಬಹುದು. ಭಾರತದಲ್ಲಿ, ಮಾನವ ಅಭಿವೃದ್ಧಿ ದುರ್ಬಲವಾಗಿರಲು, ಸಂಪನ್ಮೂಲಗಳ ಕೊರತೆ ಕಾರಣವಲ್ಲ ಎಂದು ಧೈರ್ಯವಾಗಿ ಹೇಳಬಹುದು. ಆದರೆ ಸಮಸ್ಯೆ ಇರುವುದು, ಸಂಪನ್ಮೂಲಗಳ ಹಂಚಿಕೆಯಲ್ಲಿ ಕಂಡುಬರುವ ಭ್ರಷ್ಟಾಚಾರ. ಉತ್ತಮ ಆಡಳಿತ ಅಥವಾ ಕಡಿಮೆ ಭ್ರಷ್ಟಾಚಾರ ಇದ್ದಲ್ಲಿ ಖರೀದಿ ಶಕ್ತಿಗೆ ಸಂಬಂಧಿಸಿದಂತೆ

ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ವ್ಯಕ್ತಿಯ ವರಮಾನ ಹೆಚ್ಚುತ್ತದೆ. ಒಂದು ದೇಶ ಮೊದಲು ಶ್ರೀಮಂತವಾಗಿ, ನಂತರ ಕಡಿಮೆ ಭ್ರಷ್ಟಾಚಾರ ಪ್ರದರ್ಶಿಸಲು ಸಾಧ್ಯವಿಲ್ಲ. ಒಂದು ದೇಶ ಶ್ರೀಮಂತವಾಗುವ ಮುನ್ನ ಅಲ್ಲಿ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಆದ್ದರಿಂದ ಶ್ರೀಮಂತವಾಗಲು ಮಾನವ ಅಭಿವೃದ್ಧಿಯ ಬಗ್ಗೆ ಲಕ್ಷ್ಯ ಕೊಡುವುದು ಬಹಳ ಮುಖ್ಯವಾಗುತ್ತದೆ. ಈ ಯಾವ ನಿರ್ಣಯಗಳೂ ಆಶ್ಚರ್ಯ ಮೂಡಿಸಬೇಕಿಲ್ಲ. ಆದರೆ ಪ್ರಪಂಚದಾದ್ಯಂತ ಮಾಹಿತಿಯನ್ನು ಅವಲೋಕಿಸಿದರೆ, ನಮ್ಮ ನಿರ್ಣಯಗಳು ಮತ್ತಷ್ಟು ಬಲಗೊಳ್ಳುತ್ತವೆ. ನಾನು ಭಾರತದ 2006 ರ ಖರೀದಿ ಶಕ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ವ್ಯಕ್ತಿಯ ವರಮಾನವನ್ನು ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕ ಸ್ಥಾನವನ್ನು ( 177 ರಲ್ಲಿ 126 ನೇ ಸ್ಥಾನ)ಗಮನಿಸಿದೆ . ಇದು ಏನೇನೂ ಸಂತೋಷ ತರುವ ವಿಷಯವಲ್ಲ. ನಮ್ಮ ಭ್ರಷ್ಟಾಚಾರ ಸೂಚ್ಯಂಕ 3.3 ( 10 ರಲ್ಲಿ ಬಹಳ ಅಲ್ಪ ಸ್ಥಾನ. ಕೇವಲ ಕೆಲವೇ ದೇಶಗಳು ಇದಕ್ಕಿಂತ ಕೀಳುಮಟ್ಟದಲ್ಲಿವೆ)

Human Development Index (HDI) vs. Corruption Perception Index (CPI)




Corruption Perception Index (CPI) vs. Purchasing Power Parity (PPP)






2020 ರೊಳಗೆ ಈ ವಿಷಯಗಳಲ್ಲಿ–ಅಂದರೆ ಭ್ರಷ್ಟಾಚಾರದ ಮಟ್ಟ ಹಾಗು ಮಾನವ ಅಭಿವೃದ್ಧಿ ಸೂಚ್ಯಂಕ– ನಾವು ಗಣನೀಯ ಸುಧಾರಣೆ ತರುವ ಅವಕಾಶಗಳಿವೆ. ಆ ವೇಳೆಗೆ ಭಾರತ ಫಿನ್‌ಲ್ಯಾಂಡ್‌ನಷ್ಟು ಮಟ್ಟ ತಲುಪಲು ಸಾಧ್ಯವಾಗಲಾರದು, ಆದರೂ ಭ್ರಷ್ಟಾಚಾರದಲ್ಲಿ 7 ಗಳಿಸಿದರೂ (ಯುಎಸ್‌ಎ ಸಮೀಪಕ್ಕೆ) ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 175 ರಲ್ಲಿ 20 ನೇ ಸ್ಥಾನಕ್ಕೆ ಬಂದರೆ, ನಮ್ಮ ಖರೀದಿ ಶಕ್ತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ವ್ಯಕ್ತಿಯ ವರಮಾನ ನಾಟಕೀಯ ರೀತಿಯಲ್ಲಿ ಏರುತ್ತದೆ– ಪ್ರಸಕ್ತದ 3,800 ಡಾಲರ್ ಪಿಪಿಪಿ ಯಿಂದ 25,000 ಡಾಲರ್ ಪಿಪಿಪಿ ಗೆ ಏರುತ್ತದೆ. ಒಟ್ಟಾರೆ ಜಿಡಿಪಿಯ ಅಂತರ 28.2 ಟ್ರಿಲಿಯನ್ ಡಾಲರ್ ಆಗುತ್ತದೆ. ಭ್ರಷ್ಟಾಚಾರ ಹಾಗು ಮಾನವ ಅಭಿವೃದ್ಧಿ ಸೂಚ್ಯಂಕದ ಬಗ್ಗೆ ನಾವು ತೋರಿಸುತ್ತಿರುವ ನಿರ್ಲಕ್ಷ್ಯಕ್ಕೆ ನಾವು ತೆತ್ತುತ್ತಿರುವ ಬೆಲೆ ಅಗಾಧ. ಇದರ ಬಗ್ಗೆ ಒಂದು ರಾಷ್ಟ್ರೀಯ ಮಟ್ಟದ ವಿಚಾರಣೆ ಆಗಬೇಕು.

ಭ್ರಷ್ಟಾಚಾರ ಹಾಗು ಮಾನವ ಅಭಿವೃದ್ಧಿ ಸೂಚ್ಯಂಕಗಳ ಬಗ್ಗೆ ನಾವು ಅನುಸರಿಸಬೇಕಾದ ಜಾಡು ಕೇವಲ ಮತ್ತಷ್ಟು ಕಾನೂನು ಮಾಡುತ್ತ ಹೋಗುವುದಲ್ಲ. ನಾವು ಕೆಲವು ಮೂಲಭೂತ ಕ್ಷೇತ್ರಗಳ ಬಗ್ಗೆ ಗಮನ ಕೇಂದ್ರೀಕರಿಸಬೇಕಾಗಿದೆ ಎಂದು ನಾನು ನಂಬುತ್ತೇನೆ.

ಎ. ಆಲೋಚನಾ ಮಾದರಿಗಳು : ಭಾರತದ ಬಗ್ಗೆ, ಅದರ ಭವಿಷ್ಯದ ಬಗ್ಗೆ, ಅದರ ಅಭಿವೃದ್ಧಿ ಅಗತ್ಯಗಳು ಮತ್ತು ವ್ಯಕ್ತಿಗಳ ಹಕ್ಕುಗಳ ಬಗ್ಗೆ ಯೋಚಿಸಲು ನಾವು ಬಳಸುತ್ತಿರುವ ಆಲೋಚನಾ ಮಾದರಿಗಳನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ಭಾರತೀಯ ಎಂದರೇನು? ಭಾರತೀಯ ಒಬ್ಬ ಪ್ರಜೆಗೆ ಪ್ರಜಾಸತ್ತೆ ಹಕ್ಕು ಏನನ್ನು ನೀಡುತ್ತಿದೆ?

ಬಿ. ವ್ಯಕ್ತಿಗಳ ಹಕ್ಕುಗಳ ವಿರುದ್ಧ ಸಮೂಹಗಳ ಹಕ್ಕು : ಒಬ್ಬ ಭಾರತೀಯನ ಹಕ್ಕುಗಳೊಂದಿಗೆ ವ್ಯಕ್ತಿಯ ಹಕ್ಕಿನ ಬಗ್ಗೆ ಗಮನಕೇಂದ್ರೀಕರಿಸಬೇಕು. ಭಾರತೀಯ ರಾಜಕೀಯವು ಸಮೂಹಗಳ ಹಕ್ಕುಗಳ ಮೇಲೆ ಆಧಾರಗೊಂಡಿದೆ. "ಹಕ್ಕು" ಎನ್ನುವ ಮೂಲಭೂತ ಅಂಶದ ಬಗ್ಗೆಯೇ ನಾವು ಪುನರಾವಲೋಕನ ಮಾಡಬೇಕಿದೆ. ನಮ್ಮ ಗಮನ ವ್ಯಕ್ತಿಯ ಹಕ್ಕುಗಳ ಕಡೆ ವಾಲಬೇಕು.

ಸಿ. ಮಾಹಿತಿ ಆಧಾರಿತ ಪರಿಹಾರಗಳ ವಿರುದ್ಧ ಸೈದ್ಧಾಂತಿಕ ಆಧಾರಿತ ಪರಿಹಾರಗಳು : ಇಲ್ಲಿಯವರೆಗೆ ಬಹಳ ಗಂಭೀರ ಎನ್ನುವ ನಾವು ಗುರುತಿಸಿರುವ ಪ್ರತಿ ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಿದೆ. ಆದರೂ, ಸಾಮಾನ್ಯವಾಗಿ ಚರ್ಚೆಗಳೆಲ್ಲವೂ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ನಡೆಯುತ್ತವೆ. ಮಾಹಿತಿ ವಿರೂಪಗೊಳ್ಳುತ್ತದೆ ಅಥವಾ ಬಳಕೆಯೇ ಆಗುವುದಿಲ್ಲ. ಮಾಹಿತಿ ಆಧಾರಿತ ಸತ್ಯದ ಬದಲಿಗೆ ಸಿದ್ಧಾಂತಗಳಿಂದ ಮಾನವರ ಮೇಲೆ ಬೀರುವ ಪರಿಣಾಮದ ಬಗ್ಗೆ ಚರಿತ್ರೆಯ ಪುಟಗಳಲ್ಲಿ ಹೇರಳ ಉದಾಹರಣೆಗಳಿವೆ. ಅವುಗಳಲ್ಲಿ ಸ್ಟಾಲಿನ್‌ನ ಗುಲಗರು ಅಥವಾ ಮಾವೋದ ಬರಗಾಲದಲ್ಲಿ ಸತ್ತ ಲಕ್ಷಾಂತರ ಜನರು ಸೇರಿದ್ದಾರೆ. ದುರ್ಬಲ ಆಯ್ಕೆಗಳಿಂದ ಏರ್ಪಡುವ ಅನುದ್ದೇಶಿತ ನಕಾರಾತ್ಮಕ ಪರಿಣಮಾಗಳಿಂದ ಪ್ರಜಾಪ್ರಭುತ್ವ, ಒಂದು ರಾಷ್ಟ್ರದ ಕೋಶವನ್ನು ತುಂಬಲಾರದು.

ಡಿ. ತತ್ತ್ವಗಳ ವಿರುದ್ಧ ಆಚರಣೆಗಳು : ಕ್ಲಿಷ್ಟ ನಿರ್ಧಾರಗಳು ಎದುರಾದ ಸನ್ನಿವೇಶದಲ್ಲಿ ನಾವು "ಟೈ ಬ್ರೇಕರ್"ನಲ್ಲಿ ಬಳಸುವ ಮೂಲಭೂತ ತತ್ತ್ವಗಳಿಗೆ ಮರಳಬೇಕು.

ಇ. ಸಾಮಾಜಿಕ ನ್ಯಾಯವೆಂದರೆ ಸಾಮಾಜಿಕತೆ ಅಲ್ಲ : ಎಲ್ಲರಿಗೂ ಸಮಾನ ಅವಕಾಶ ಸೃಷ್ಟಿಸಿ ಅಸಮಾನತೆಯನ್ನು ಹೋಗಲಾಡಿಸುವ ಸಾಮಾಜಿಕ ನ್ಯಾಯವನ್ನು ನಾವು ಸಮಾಜವಾದವೆಂದು ತಪ್ಪು ಗ್ರಹಿಸಬಾರದು. ಸಮಾಜವಾದ ಎನ್ನುವುದು ಒಂದು ಸಿದ್ಧಾಂತ. ಸಂಪತ್ತನ್ನು ಸೃಷ್ಟಿಸಿ ಸಾಮಾಜಿಕ ಸಮಾನತೆ ಸೃಷ್ಟಿಸುವಲ್ಲಿ ಇದು ಎಲ್ಲಿಯೂ ಯಶಸ್ವಿಯಾಗಿಲ್ಲ.

ಎಫ್. ಕಾರ್ಯಕ್ಷಮತೆಯ ಹೊಣೆಗಾರಿಕೆ : ಹೊಣೆಗಾರಿಕೆಗೆ ನಾವು ಒಂದು ಹೊಸ ವ್ಯವಸ್ಥೆ ರೂಪಿಸಬೇಕು. ಸೋಂಕು ಹಾಗು ಅತಿಸಾರ ಸಂಬಂಧಿತ ಕಾಯಿಲೆಗಳಿಂದ ಪ್ರತಿವರ್ಷ 2 ದಶಲಕ್ಷ ಮಕ್ಕಳು ಸಾಯುತ್ತಿವೆ. ಈ "ಅನಗತ್ಯ ಹಾಗು ತಡೆಗಟ್ಟಬಹುದಾದ" ಸಾವುಗಳಿಗೆ ಯಾರು ಹೊಣೆ?

ಜಿ. ರಾಜದ್ರೋಹವಾಗಿ ಭ್ರಷ್ಟಾಚಾರ : ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರವನ್ನು ರಾಜದ್ರೋಹದಷ್ಟು ಗಂಭಿರವಾಗಿ ಪರಿಗಣಿಸಿ ನಿಯಂತ್ರಿಸದಿದ್ದರೆ, ಬದಲಾವಣೆಯ ಪ್ರಕ್ರಿಯೆ ಬಹಳ ಮಂದಿಗತಿಯಲ್ಲಿ ಸಾಗುತ್ತದೆ.

ಹೆಚ್. ಕಲ್ಪನೆಯ ಬಗ್ಗೆ ಗಮನ ಕೇಂದ್ರೀಕರಣದ ವಿರುದ್ಧ ಸಂಪನ್ಮೂಲಗಳ ಬಗ್ಗೆ ಗಮನ ಕೇಂದ್ರೀಕರಿಸುವುದು : ಬಹಳ ಪ್ರಭಾವವುಳ್ಳ ಅವಕಾಶಗಳಿಗೆ ನಾವು ನಮ್ಮ ಸಂಪನ್ಮೂಲಗಳನ್ನು ಯಾವ ರೀತಿ ಬಳಸುತ್ತೇವೆ ಎನ್ನುವುದು ಸಂಪನ್ಮೂಲಗಳ ಗಾತ್ರಕ್ಕಿಂತ ಮುಖ್ಯವಾದದ್ದು.

ಈ ತತ್ತ್ವಗಳು ಭಾರತದ ಆಡಳಿತ ಸಂಸ್ಕೃತಿಯಲ್ಲಿ ಆಳವಾದ ಬದಲಾವಣೆಗೆ ಒಳಗಾಗಬೇಕು ಎನ್ನುವುದು ನನ್ನ ಅಭಿಪ್ರಾಯ. ಭಾರತದಲ್ಲಿ ಒಂದು ರೂಪಾಂತರ ಬದಲಾವಣೆಗೆ ಇದು ಅತ್ಯಾವಶ್ಯಕ ಎಂದು ನಾನು ನಂಬುತ್ತೇನೆ.

**ವಿನೂತನ ಮರಳಿನ ಡಬ್ಬ**

India@75.ಗೆ ಅಭಿವೃದ್ಧಿಯ ಸನ್ನಿವೇಶದಲ್ಲಿ ನಾನು ಮುಖ್ಯ ಚಾಲಕ ಅಂಶಗಳನ್ನು ಗುರುತಿಸಿದ್ದೇನೆ. ಅವು ಕಡುಬಡತನಕ್ಕೆ ಸಂಬಂಧಿಸಿದ್ದಲ್ಲ, ಬದಲಿಗೆ ವರಮಾನ ಅಸಮಾನತೆಗೆ, ಜೀವನಶೈಲಿಗಳನ್ನು ಗುರುತಿಸುವುದಕ್ಕೆ, ನಗರೀಕರಣ ಮತ್ತು ಸಾರ್ವತ್ರಿಕ ಆಕಾಂಕ್ಷೆಗಳಿಗೆ, ಬೆಲೆ-ಕಾರ್ಯಕ್ಷಮತೆ ಸಂಬಂಧಗಳ ನಾಟಕೀಯ ಬದಲಾವಣೆಗೆ,ಆರ್ಥಿಕ ಅಭಿವೃದ್ಧಿಗೆ ಹಾಗು ಪಾರಿಸರಿಕ ವಿಷಮಸ್ಥಿತಿಗೆ, ಆಡಳಿತದ ಪಾತ್ರಕ್ಕೆ ಹಾಗು ಕಾನೂನಿಗೆ ಸಂಬಂಧಿಸಿದ್ದು. ನನ್ನ ಚರ್ಚೆಯಲ್ಲಿ ಮಾಪನದ ಪರಿಕಲ್ಪನೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವುದು ಒಳಗೊಂಡಿದೆ. ಭಾರತದಂಥ ಬೃಹತ್ ದೇಶ–1.2 ಬಿಲಿಯನ್ ಜನಸಂಖ್ಯೆ ಇರುವ ದೇಶಕ್ಕೆ ನಾವು ಇಲ್ಲಿಯವರೆಗೆ ಕಲ್ಪಿಸಲೂ ಸಾಧ್ಯವಾಗಿರದ ಕಾರ್ಯಾಚರಣೆಗಳ ಮಾಪನವನ್ನು ಬೇಡುತ್ತದೆ. ಅದೇ ರೀತಿ, ನಾನು ಮಾರುಕಟ್ಟೆ ಆಧಾರಿತ ಪರಿಹಾರಗಳ ಮೇಲೆ ಗಮನ ಹರಿಸಿದ್ದೇನೆ. ಮಾಪನ ಹಾಗು ಮಾರುಕಟ್ಟೆ ಆಧಾರಿತ ನೀತಿಗಳು ಈ ವಿಶ್ಲೇಷಣೆಯಲ್ಲಿ ಅಡಕವಾಗಿವೆ.

ಭಾರತದ ಸನ್ನಿವೇಶದಲ್ಲಿ ನಾನು ಗುರುತಿಸಿದ ಆರು ಸಮಸ್ಯೆಗಳನ್ನು ನಿರ್ಲಕ್ಷಿಸಲಾಗದು. ಎಲ್ಲಾ ಅಭಿವೃದ್ಧಿ ಕಾರ್ಯಗಳು ಈ ಮಿತಿಯನ್ನು ಒಪ್ಪಿಕೊಳ್ಳಬೇಕು ಮತ್ತು ಅವುಗಳನ್ನು " ಅಪರಿಹಾರ"ಗಳೆಂದು ಪರಿಗಣಿಸಬೇಕು. ಈ ಮಿತಿಗಳ ನಡುವೆಯೇ ನಾವು ವಿನೂತನ ಪರಿಹಾರಗಳನ್ನು ಹುಡುಕಬೇಕು. ಈ ಮಿತಿಗಳ ಪ್ರಾಮುಖ್ಯತೆಯನ್ನು ಮನದಟ್ಟು ಮಾಡಲು, ನಾನು **ವಿನೂತನ ಮರಳಿನ ಡಬ್ಬ** ಅಥವಾ **ಅಭಿವೃದ್ಧಿ ಮರಳುಪೆಟ್ಟಿಗೆಯ** ಕಲ್ಪನೆಯನ್ನು ಅಭಿವೃದ್ಧಿಪಡಿಸಿದೆ. ಸಾಮಾಜಿಕ ಸಮಾನತೆಯು ವರಮಾನ ಅಸಮಾನತೆಯ ಅಗತ್ಯವನ್ನು ಗುರುತಿಸಲು ಸೂಚಿಸುತ್ತದೆ, ಕಾನೂನಿನ ಪರಿಮಿತಿ ಆಡಳಿತಾತ್ಮಕ ಸಮಸ್ಯೆಗಳನ್ನು ಉಲ್ಲೇಖಿಸುತ್ತದೆ, ಪಾರಿಸರಿಕ ಸ್ಥೈರಣೆ ಪರಿಮಿತಿಯು ಪಾರಿಸರಿಕ ಚಟುವಟಿಕೆಗಳ ಅಗತ್ಯವನ್ನು ಉಲ್ಲೇಖಿಸುತ್ತದೆ ಮತ್ತು ಹೊಸ ಬೆಲೆ-ಕಾರ್ಯಕ್ಷಮತೆ ಪರಿಮಿತಿಯು, ನಾವು ಈ ಮೊದಲು ಚರ್ಚಿಸಿದ ಬೆಲೆ-ಕಾರ್ಯಕ್ಷಮತೆ ಬದಲಾವಣೆಯನ್ನು ಅಳವಡಿಸಿಕೊಂಡಿದೆ. ಈ ಪರಿಮಿತಿಗಳ ಮಧ್ಯೆ ಇದ್ದು ಕೂಡ ನಾವು ಕಾರ್ಯ ನಿರ್ವಹಿಸಬಹುದು ಹಾಗು ವಿನೂತನ ಪರಿಹಾರಗಳನ್ನು ಹುಡುಕಬಹುದೆಂದು ನಮಗೆ ಗೊತ್ತು. ಉದಾಹರಣೆಗೆ, ನಾವು ಬೆಲೆ-ಕಾರ್ಯಕ್ಷಮತೆ ಸಮಸ್ಯೆಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದೇವೆ. ನಾವು ತ್ವರಿತ ಗತಿಯಲ್ಲಿ ಮೇಲೇರುತ್ತಿದ್ದೇವೆ. ಮಾರುಕಟ್ಟೆ ಆಧಾರಿತ ವ್ಯವಸ್ಥೆಗಳ ಮೌಲ್ಯ ಚಾಲನೆ ಪಡೆದಿದೆ. ಸಾಗಣೆಯಲಿ ಸಿಎನ್‌ಜಿ ಬಳಕೆ ಅಥವಾ ಮಳೆನೀರಿನ ಕೊಯ್ಲುಗಳ ಮೂಲಕ ಪಾರಿಸರಿಕ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದ್ದೇವೆ. ಕಾನೂನು ಅನುಷ್ಠಾನದ ವಿಷಯದಲ್ಲಿ, ಆಡಳಿತ ಚುರುಕುಗೊಳಿಸುವ ವಿಷಯದಲ್ಲಿ ಅಥವಾ ಮಾರುಕಟ್ಟೆ ಆಧಾರಿತ ವ್ಯವಸ್ಥೆಗಳ ಮೂಲಕ ಸಾಮಾಜಿಕ ಸಮಾನತೆ ಸ್ಥಾಪಿಸುವಲ್ಲಿ ಮಾತ್ರ ನಾವು ಅಂತಹ ಪ್ರಗತಿ ಸಾಧಿಸಿಲ್ಲ. ಈ ಕೆಳಗೆ ತೋರಿಸಿರುವ ಮರಳಿನ ಪೆಟ್ಟಿಗೆ ಈ ಎಲ್ಲಾ ಅಗತ್ಯಗಳನ್ನು ಒಟ್ಟಾಗಿ ಹಾಕಿ, ಸಾಧ್ಯಂತ ಎಲ್ಲಾ ನಾವೀನ್ಯತೆಗಳನ್ನು, ನೀತಿರಚನೆಗೆ ಸಂಬಂಧಿಸಿದ ನಿರ್ಧಾರಗಳನ್ನು ಮತ್ತು ಆದ್ಯತೆಗಳನ್ನು ಈ ಮರಳುಪೆಟ್ಟಿಗೆಯ ಮಿತಿಯೊಳಗೆ ಕೈಗೊಳ್ಳಬೇಕು ಎಂದು ಸೂಚಿಸುತ್ತದೆ.

ಆರ್ಥಿಕ ಬೆಳವಣಿಗೆಗೆ "ಮರಳುಪೆಟ್ಟಿಗೆ"




ಈ ಪರಿಮಿತಿಗಳನ್ನು ಉಲ್ಲಂಘಿಸಬೇಡಿ ಎಂದು ನಾನು ಹೇಳುತ್ತೇನೆ. ಈ ಪರಿಮಿತಿಯೊಳಗೇ ಕೆಲಸ ಮಾಡಿ. ಈ ಪರಿಮಿತಿಗಳೊಳಗೆ ನಾವು ಹೊಸ ಪರಿಹಾರವನ್ನು ಕಂಡುಹಿಡಿದರೆ, ಖಂಡಿತ ಅದ್ಭುತ ಯಶಸ್ಸು ಗಳಿಸುತ್ತೇವೆ. ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ, ವ್ಯಾಪಾರಸ್ಥರಿಗೆ, ಸ್ವಯಂ ಸೇವಾ ಸಂಸ್ಥೆಗಳಿಗೆ ಹಾಗು ಖಾಸಗಿ ಸಾರ್ವಜನಿಕರಿಗೆ–ಎಲ್ಲರಿಗೂ ಒಂದೇ ಮರಳುಪೆಟ್ಟಿಗೆ. ಹೊಸತನ ಹುಡುಕುವಲ್ಲಿ ಪ್ರತಿಯೊಬ್ಬರ ಮಾರ್ಗ ಬೇರೆಯಾಗಿದ್ದರೂ, ಸರಹದ್ದಿನ ಪರಿಮಿತಿ ಮಾತ್ರ ಎಲ್ಲರಿಗೂ ಒಂದೇ.

ಈ ಮರಳುಪೆಟ್ಟಿಗೆಯ ಪರಿಮಿತಿಗಳನ್ನು ಒಪ್ಪಿಕೊಂಡು, ಅದರೊಳಗೆ ಕೆಲಸ ನಿರ್ವಹಿಸುವಲ್ಲಿ ನಾವು ಶಿಸ್ತು ಪ್ರದರ್ಶಿಸಿದರೆ, ಈ ಉಪನ್ಯಾಸದ ಆರಂಭದಲ್ಲಿ India@75.ಗೆ ನಾನು ಪ್ರತಿನಿಧಿಸಿದ ಸಾಮರ್ಥ್ಯ ಸಾಧ್ಯಂತವಾಗುತ್ತದೆ. ಭಾರತದ ಭವಿಷ್ಯದ ಬಗ್ಗೆ ನಾನು ಯಾವಾಗಲೂ ಆಶಾದಾಯಕ ಭಾವನೆ ಹೊಂದಿದ್ದೇನೆ. 1989 ರಲ್ಲಿ ಸಿಐಐ ಸಮಾವೇಶದಲ್ಲಿ ನಾನು ಮಂಡಿಸಿದ ಉಪನ್ಯಾಸದೊಂದಿಗೆ ಇಂದಿನ ಉಪನ್ಯಾಸ ಮುಗಿಸುತ್ತೇನೆ. 1989 ರಲ್ಲಿ ನಾನು ಕಂಡಂತೆ ಭಾರತ ಭವಿಷ್ಯ ಈ ಕೆಳಗೆ ತೋರಿಸಲಾಗಿದೆ :

ಉಗಮಗೊಳ್ಳುತ್ತಿರುವ ವಿಶ್ವ ವ್ಯವಸ್ಥೆ

1989 ರಲ್ಲಿ ನನ್ನ ದೃಷ್ಟಿಕೋನ

## The Emerging World Order:
## My View in 1989




ಆ ಸಮಯದಲ್ಲಿ ಪ್ರಪಂಚದ ಕೈಗಾರಿಕಾ ಚಿತ್ರಣವನ್ನು ನಾವು ಗಮನಿಸಿದರೆ, ಆಗ ಜಾಗತಿಕ ಮಟ್ಟದ ಸಂಸ್ಥೆಗಳು ಹಾಗು ಸ್ಥಳೀಯ ಸಂಸ್ಥೆಗಳಿದ್ದವು. ಕೆಲವು ದೇಶಗಳು ಬೃಹತ್ತ್ (ವಿಶ್ವ ಮಟ್ಟದ) ಸ್ಥಳೀಯ ಮಾರುಕಟ್ಟೆಯನ್ನು ಪ್ರತಿನಿಧಿಸುತ್ತಿದ್ದವು ಮತ್ತು ಇನ್ನು ಕೆಲವು ಸಣ್ಣ ಸ್ಥಳೀಯ ಮಾರುಕಟ್ಟೆಗಳನ್ನು ಪ್ರತಿನಿಧಿಸುತ್ತಿದ್ದವು. ಫಿನ್‌ಲ್ಯಾಂಡ್, ನೆದರ್‌ಲ್ಯಾಂಡ್, ಸ್ವಿಟ್ಜರ್‌ಲ್ಯಾಂಡ್‌ಗಳಲ್ಲದೆ ಅಮೇರಿಕ, ಜಪಾನ್ ಹಾಗು ಜರ್ಮನಿಯಂಥ ಸಣ್ಣ ಸ್ಥಳೀಯ ಮಾರುಕಟ್ಟೆಗಳಿರುವ ದೇಶಗಳಿಂದ ಜಾಗತಿಕ ಮಟ್ಟದ ಸಂಸ್ಥೆಗಳು ತಲೆಯೆತ್ತಿದವು. ಆದರೆ, ತಾವು ಜಾಗತಿಕ ಮಟ್ಟದ ಸಂಸ್ಥೆಗಳಿಗೆ ತವರೂರಾಗಿದ್ದುಕೊಂಡು ವಿಶ್ವಮಟ್ಟದ ಸ್ಥಳೀಯ ಮಾರುಕಟ್ಟೆಗಳನ್ನೂ ಪ್ರತಿನಿಧಿಸುತ್ತೇವೆ ಎಂದು ಪ್ರತಿಪಾದಿಸುವ ದೇಶಗಳು ಬೆರಳೆಣಿಕೆಯಷ್ಟು ಮಾತ್ರ. ಆಗ ಭಾರತದಲ್ಲಿ ಜಾಗತಿಕ ಮಟ್ಟದ ಸಂಸ್ಥೆಗಳಿರಲಿಲ್ಲ.  ಇದ್ದದ್ದು ಸಣ್ಣ ಸ್ಥಳೀಯ ಮಾರುಕಟ್ಟೆ. ಆಗ ನಾನು ಮುನ್ನಂದಾಜು ಮಾಡಿದ್ದು, 2000 ದೊಳಗೆ ಭಾರತ ಹಾಗು ಚೀನಾ ಅಮೆರಿಕ, ಜಪಾನ್ ಮತ್ತು ಜರ್ಮನಿಗಳಂಥ ಆಯ್ದ ಕೆಲವೇ ದೇಶಗಳೊಂದಿಗೆ ಸೇರುತ್ತದೆ. ಇನ್ನೂ ನಾವಲ್ಲಿ ತಲುಪಿಲ್ಲ, ಆದರೆ ಆ ಮಾರ್ಗದಲ್ಲಿ ಸಾಕಷ್ಟು ನಡೆದಿದ್ದೇವೆ. ಭವಿಷ್ಯದಲ್ಲಿ ಜಿ–7 ಮತ್ತು ಜಿ–8 ರಾಷ್ಟ್ರಗಳು ಭಾರತವನ್ನು ತಮ್ಮೊಂದಿಗೆ ಸೇರಿಸಿಕೊಳ್ಳಬೇಕಾಗುತ್ತದೆ. ಆಗ, ಇದನ್ನು ಹೆಚ್ಚು ಜನ ನಂಬಲಿಲ್ಲ. ಆದರೆ ಇಂದು ಅದು ಸತ್ಯವಾಗುತ್ತಿದೆ. ಇಂದಿನ ವಿಶ್ವ ಆರ್ಥಿಕ ವ್ಯವಸ್ಥೆಯಲ್ಲಿ ಭಾರತ ಒಂದು ನಿಚ್ಚಳ ಸ್ಥಾನ ಗಳಿಸಿದೆ ಎಂದು ನಾವು ನಂಬುತ್ತೇವೆ.

ಭಾರತದ ಬಡಜನತೆ ಈ ಪ್ರಯಾಣಕ್ಕೆ ಸಿದ್ಧರಿದ್ದಾರೆ ಎಂದು ನಾನು ನಂಬುತ್ತೇನೆ. ಸಮಸ್ಯೆಯಿರುವುದು ಭಾರತದ ಮೇಲ್ವರ್ಗದವರಲ್ಲಿ ಹಾಗು ಭಾರತದ ರಾಜಕೀಯ ನಾಯಕರಲ್ಲಿ. ನೀವು ಭಾರತವನ್ನು ಅರ್ಥ ಮಾಡಿಕೊಳ್ಳಬೇಕಿದ್ದರೆ, ನಾವು ಭಾರತದ ಪ್ರಾಚೀನಕ್ಕೆ ಹೋಗಬೇಕು ಎಂದು ನನ್ನ ಅಭಿಪ್ರಾಯ. ನಮ್ಮ ಕೆಲ ದಶಕಗಳ ಹಿಂದಿನ ಇತಿಹಾಸ, ನಮ್ಮ ಜನರ ಮೇಧಾವಿತನದ ಸುಳಿವು ನೀಡುವುದಿಲ್ಲ. ಭಾರತದ ಹಾಗು ಪ್ರಾಯಶಃ ವಿಶ್ವದ ಪ್ರಥಮ ನೀತಿಶಾಸ್ತ್ರಜ್ಞ ಎನಿಸಿಕೊಂಡದ್ದು ತಮಿಳಿನ ಸಂತ ತಿರುವಳ್ಳುವಾರರು. ಅವರು ಬಹಳ ಅದ್ಭುತವಾದದ್ದನ್ನು ಹೇಳಿದರು : "ದೇವರೇ ನಿಮ್ಮ ವಿರುದ್ಧ ಸಂಚು ನಡೆಸಿದರೂ, ಕಷ್ಟಪಟ್ಟು ಕೆಲಸ ಮಾಡಿ–ನೀವು ಅಲ್ಲಿಗೆ ತಲುಪುವಿರಿ". ಇದನ್ನು ಅವರು ನಮಗೆ 2000 ವರ್ಷಗಳ ಹಿಂದೆ ಹೇಳಿದರು. ಅವರು ನಮಗೆ ಹೇಳಿದ್ದು : "ನಿಮ್ಮನ್ನು ಬಿಟ್ಟು ಇತರರನ್ನು ದೂಷಿಸಬೇಡಿ". ನಮ್ಮ ಭವಿಷ್ಯಕ್ಕೆ ಭಾರತೀಯರಾದ ನಾವೇ ಜವಬ್ದಾರಿ ತೆಗೆದುಕೊಳ್ಳುವುದಕ್ಕಿಂತ ಹೆಚ್ಚಿನ ಬಲವಾದ ಅಸ್ತ್ರ ಮತ್ತೊಂದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಭಾರತ ಜಾಗತಿಕ ಮುಂದಾಳುಗುವುದರಲ್ಲಿ ವಿಫಲಗೊಂಡರೆ, ಆ ವೈಫಲ್ಯಕ್ಕೆ ನಾವು ಭಾರತೀಯರೇ ಕಾರಣರಾಗುತ್ತೇವೆ. ನಾವು ಯಶಸ್ಸು ಹೊಂದುವುದನ್ನು ಹೊರಗಿನ ಯಾವ ಶಕ್ತಿಯೂ ತಡೆಯುತ್ತಿಲ್ಲ. ಆದ್ದರಿಂದ ಈ ಪರಿವರ್ತನೆ ಕೇವಲ ಸಂಪನ್ಮೂಲದ್ದಲ್ಲ. ನವಭಾರತದ ನಿರ್ಮಾಣಕ್ಕೆ ಬೇಕಾಗಿರುವ ನಮ್ಮ ಆತ್ಮವಿಶ್ವಾಸ ಕುರಿತದ್ದಾಗಿದೆ. ಇಂತಹ ಒಂದು ಭಾರತವನ್ನು ಕಲ್ಪಿಸಿಕೊಳ್ಳುವಲ್ಲಿ ನಾವು ವಿಫಲರಾದರೆ, ನಾವದನ್ನು ಸೃಷ್ಟಿಸಲು ಸಾಧ್ಯವಿಲ್ಲ. ಕಲ್ಪನೆ ಹಾಗು

ಭಾರತದ ನಿಜವಾದ ಗುರಿಯ ಬಗ್ಗೆ ನಂಬಿಕೆ, ಈಗಿನ ಅಗತ್ಯವಾಗಿದೆ. ನಮ್ಮಲ್ಲಿ ಆ ವಾಂಛೆ ಇರಬೇಕು, ಧೈರ್ಯವಿರಬೇಕು ಹಾಗು ಸಾಕಷ್ಟು ಪ್ರಮಾಣದಲ್ಲಿ ಮಾನವೀಯತೆ ಮತ್ತು ವಿನಯವೂ ಇರಬೇಕು.

ಧನ್ಯವಾದ

[1]*The Knowledge Commission* under the leadership of Mr. Sam Pitroda and the *Skills Commission* under the leadership of ……are good starts in this direction.

[2] C.K. Prahalad: The Fortune at the Bottom of the Pyramid: Eradicating Poverty through Profits, Wharton Publishing, 2004 and
C.K. Prahalad: the Innovation Sand box; Strategy+ Business, 2007

[3] World Resources Institute

[4] Source: UN Population division: World Population Prospects 2006

[5]I have talked about 10% growth and 10 million new jobs for several years starting 2002.

[6] World resources institue